ಅಧ್ಯಕ್ಷರು :- 1994-95ನೇ ಸಾಲಿನ ಪೂರಕ ಅಂದಾಜುಗಳ ಎರಡನೇ ಕಂತಿನಲ್ಲಿ ಚರ್ಚೆ ಹಾಗೂ ಪೂರಕ ಬೇಡಿಕೆಗಳನ್ನು ಮತಕ್ಕೆ ಹಾಕುವುದು. 1994-95ನೇ ಸಾಲಿನ ಪೂರಕ ಅಂದಾಜುಗಳ ಅಂತಿಮ ಕಂತಿನ ಮೇಲೆ ಚರ್ಚೆ ಹಾಗೂ ಪೂರಕ ಬೇಡಿಕೆಗಳನ್ನು ಮತಕ್ಕೆ ಹಾಕುವುದು.

ಶ್ರೀ ಸಿದ್ಧರಾಮಯ್ಯ (ಹಣಕಾಸು ಸಚಿವರು):- ಸನ್ಮಾನ್ಯ ಅಧ್ಯಕ್ಷರೇ, ದಿನಾಂಕ: 3 13 1995ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಬಿಯಾಚನೆಗಳು ಕ್ರಮಾಂಕ 5, 9, 10, 13, 17, 21, 27, 28, 34, 36, 41, 42, 43, 47, 48 ಮತ್ತು 51 ಇವುಗಳಿಗೆ ಸಂಬಂಧಿಸಿದ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ಅನ್ವಯಿಸಿದ ಮೊಬಲಗನ್ನು ಮೀರಿದಂತೆ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಸಿದ್ಧರಾಮಯ್ಯ (ಹಣಕಾಸು ಸಚಿವರು):- ಸನ್ಮಾನ್ಯ ಅಧ್ಯಕ್ಷರೇ, ಎರಡು ಕಂತಿನಲ್ಲಿ ಪೂರಕ ಅಂದಾಜುಗಳನ್ನು ಸಭೆಯ ಮುಂದೆ ಮಂಡಿಸಿದೆ. ಎರಡನೆಯ ಕಂತಿನ ಪೂರಕ ಅಂದಾಜುಗಳಲ್ಲಿ 49 ಕೋಟಿ 92 ಲಕ್ಷ ರೂಪಾಯಿಗಳು. ಅಂತಿಮ ಕಂತಿನಲ್ಲಿ 514 ಕೋಟಿ 56 ಲಕ್ಷ ರೂಪಾಯಿಗಳು. ಅಂತಿಮ ಕಂತಿನಲ್ಲಿ 516 ಕೋಟಿ ಇದ್ದರೂ ಸಹ ರಾಜಸ್ವ ಖಾತೆಯಿಂದ ಹೋಗಿರತಕ್ಕ ಮೊತ್ತ 123.62 ಕೋಟಿ. ಈ ಪೂರಕ ಅಂದಾಜುಗಳಲ್ಲಿ ಆಯವ್ಯಯದಲ್ಲಿ ಸೇರಿಸಿಲ್ಲದಿರುವ ಮತ್ತು ಹೊಸ ಕಾರ್ಯಕ್ರಮಗಳಿದ್ದರೆ, ಹೊಸ ಕಾರ್ಯಕ್ರಮಕ್ಕೆ ಹಣವನ್ನು ಖರ್ಚು ಮಾಡಬೇಕಾದ ಪರಿಸ್ಥಿತಿ ಬಂದಾಗ ಅದನ್ನು ಖರ್ಚು ಮಾಡಿದ ಮೇಲೆ ಅದಕ್ಕೆ ಈ ರೀತಿ ಪೂರಕ ಅಂದಾಜುಗಳ ಮೂಲಕ ಸಭೆಯ ಒಪ್ಪಿಗೆಯನ್ನು ಪಡೆಯತಕ್ಕ ಪದ್ಧತಿ ಮೊದಲಿನಿಂದಲೂ ಬಂದಿರತಕ್ಕದ್ದು. ಆದುದರಿಂದ ಮಾನ್ಯ ಸದಸ್ಯರು ಈ ಎರಡು ಕಂತುಗಳಲ್ಲಿರತಕ್ಕ ಪೂರಕ ಅಂದಾಜುಗಳ ಖರ್ಚುಗಳಿಗೆ ಒಪ್ಪಿಸಿಯನ್ನು ಕೊಡಬೇಕೆಂದು ನಾನು ಮಾನ್ಯ ಸದಸ್ಯರನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎ.ರಾಮದಾಸ್ :- ಸನ್ಮಾನ್ಯ ಅಧ್ಯಕ್ಷರೇ, ದಯಮಾಡಿ ಈ ಪದ್ಧತಿ ಅರ್ಥ ಹೀನವೆಂದು ಕಾಣಿಸುತ್ತದೆ. ಯಾವುದೇ ಪೂರಕ ಬಿಲ್ಲುಗಳಾಗಲೀ ಕೊನೆಯಪಕ್ಷ ಎರಡು ದಿವಸ ಮೊದಲು ಕೊಟ್ಟು ಆ ಬಿಲ್ಲಿನಲ್ಲಿರತಕ್ಕ ವಿಚಾರಗಳನ್ನು ಮಂಥನ ಮಾಡಿಕೊಂಡು ಇಲ್ಲಿ ಬಂದು ವಿಚಾರಗಳನ್ನು ಮಂಡನೆ ಮಾಡುವುದಕ್ಕೆ ಅವಕಾಶ ಸಿಕ್ಕಿದರೆ ಅರ್ಥಪೂರ್ಣವೆನಿಸುತ್ತದೆ. ಇಲ್ಲದಿದ್ದರೆ ಪೂರಕ ಬಿಲ್ಲುಗಳನ್ನು ಕೇವಲ ಧ್ವನಿಯಲ್ಲಿ ಹೌದು, ಇಲ್ಲ ಎಂದು ಹೇಳುವುದರಲ್ಲಿ ಅರ್ಥ ಬರುವುದಿಲ್ಲ. ಈ ಸಲ ಏನು ಮಾಡುವುದಕ್ಕಾಗುವುದಿಲ್ಲ. ದಯಮಾಡಿ ಮುಂದಿನ ಸಲವಾದರೂ ಸಹ ಪೂರಕ ಬಿಲ್ಲುಗಳನ್ನು ಕೊಡುವಾಗ ಕೊನೆಯ ಪಕ್ಷ ಮೂರು ದಿವಸ ಮೊದಲು ಕೊಟ್ಟರೆ

ಒಳ್ಳೆಯದೆಂದು ನನ್ನ ಭಾವನೆ.

ಶ್ರೀ ವಾಟಾಳ್ ನಾಗರಾಜ್ :- ಅಧ್ಯಕ್ಷರೇ, ನಾವು ಇದರ ಬಗ್ಗೆ ಚರ್ಚೆ ಮಾಡಲೇಬೇಕು, ಚರ್ಚೆ ನಡೆಯಲೇಬೇಕು. ಈ ಪೂರಕ ಅಂದಾಜುಗಳನ್ನು ನಮಗೆ ಈಗ ಒದಗಿಸಿದ್ದಾರೆ. ಇದನ್ನು ನಮಗೆ ಕೊಡಿ ಎಂದು ಕಾಡಿಬೇಡಿ ತೆಗೆದುಕೊಂಡಂತೆ ಆಗಿದೆ. ಆದುದರಿಂದ ಇದನ್ನು ತಾವು ನಾಳೆ ತರುವುದು ಒಳ್ಳೆಯದು. ಏಕೆಂದರೆ ಇದರ ಬಗ್ಗೆ ಚರ್ಚೆಯಾಗಬೇಕು. ತೊಂದರೆಯಲ್ಲಿ ಸಿಕ್ಕಿದವರಿಗೆ ಪರಿಹಾರ ಕೊಡತಕ್ಕದ್ದು, ಚಳುವಳಿಯಾದಾಗ ತೊಂದರೆಯಾದವರಿಗೆ ಪರಿಹಾರ ಕೊಡತಕ್ಕದ್ದು ಮುಂತಾದ ವಿಚಾರಗಳು ಬರುತ್ತವೆ.

ಶ್ರೀ ಸಿದ್ಧರಾಮಯ್ಯ :- ಇದನ್ನು ಈ ಹಿಂದೆಯೇ ಮಾಡಿರತಕ್ಕದ್ದು. ಇದು ಸಭೆಯ ಮುಂದೆ ಇರತಕ್ಕದ್ದು. ಎರಡನೆಯ ಕಂತಿನ ಪೂರಕ ಅಂದಾಜುಗಳು ಡಿಸೆಂಬರ್ ತಿಂಗಳಿನಲ್ಲಿ ಸಭೆಯ ಮುಂದಿಟ್ಟಿರತಕ್ಕದ್ದು. ಅಂತಿಮ ಕಂತಿನ ಪೂರಕ ಅಂದಾಜುಗಳು 24ನೇ ತಾರೀಖು ಸಭೆಯ ಮುಂದಿಟ್ಟಿರತಕ್ಕದ್ದು. ಇದನ್ನು ಇವತ್ತು ಇಟ್ಟಿರತಕ್ಕದ್ದಲ್ಲ. ಮಾನ್ಯ ಸದಸ್ಯರುಗಳಿಗೆ ಇದರ ಎಲ್ಲಾ ಪ್ರತಿಗಳೂ ಸಹ ಹೋಗಿದೆ. ಆದ್ದರಿಂದ ಮಾನ್ಯ ಸದಸ್ಯರುಗಳು ಇದಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ನಿಮ್ಮ ಸರ್ಕಾರದವರು ಏನೇನು ಕೊಟ್ಟಿದ್ದೀರಿ, ಎಂಬ ಬಗ್ಗೆ ತಿಳಿದುಕೊಳ್ಳಬೇಕು. ಹಿಂದಿನ ಸರ್ಕಾರ ಕೊಟ್ಟಿದೆ ಎಂದರೆ ಹೇಗೆ. ಅಧ್ಯಕ್ಷರೆ, ಇದನ್ನು ನಾಳೆ ತೆಗೆದುಕೊಂಡರೆ ಒಳ್ಳೆಯದು. ಇದರ ಬಗ್ಗೆ ನಾಳೆ ಚರ್ಚೆ ಮಾಡಬೇಕು. ಇದರಲ್ಲಿನ ಅನೇಕ ವಿಚಾರಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ.

ಶ್ರೀ ಯು.ಬಿ. ಬಣಕಾರ್ :- ಪ್ರತಿಯೊಬ್ಬರಿಗೂ ಅವಕಾಶ ಸಿಗಬೇಕು.

ಅಧ್ಯಕ್ಷರು :- ಆ ರೀತಿ ಅಲ್ಲ ಬಣಕಾರ್‌ರವರೆ. ಸನ್ಮಾನ್ಯ ಹಣಕಾಸಿನ ಸಚಿವರು ಹೇಳಿದಂತೆ ಇದನ್ನು ಡಿಸೆಂಬರ್ ತಿಂಗಳಲ್ಲಿ ಒಂದು ಕಂತನ್ನು, ಇನ್ನೊಂದನ್ನು ಹೋದ 24ನೇ ತಾರೀಖಿನಿಂದ ಮಂಡನೆ ಮಾಡಿದ್ದಾರೆ. ವಿಧೇಯಕದ ಮಂಡನೆ ಮಾತ್ರ ಈಗ ಮಾಡಿದ್ದಾರೆ. ಅದರ ಬಗ್ಗೆ ತಾವು ಓದಿಕೊಂಡು ಬರಬೇಕು. ಎಲ್ಲಾರಿಗೂ ಕವರ್‌ನಲ್ಲಿ ಇದರ ಪ್ರತಿಗಳನ್ನು ಕಳಿಸಿಕೊಟ್ಟಿದ್ದಾರೆ. ಆದರೆ ಅನೇಕ ಸದಸ್ಯರು ಆ ಕವರನ್ನೇ ತೆರೆಯುವುದಿಲ್ಲ, ನೋಡುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು :- ನಮಗೆ ಕಳಿಸಿಕೊಟ್ಟಿಲ್ಲ.

ಅಧ್ಯಕ್ಷರು :- ಎಲ್ಲರಿಗೂ ಕಳಿಸಿಕೊಟ್ಟಿದ್ದಾರೆ. ಇಲ್ಲವೆಂದು ಈಗ ಹೇಳಿದರೆ ಹೇಗೆ? ಮಾನ್ಯ ವಾಟಾಳ್ ನಾಗರಾಜ್‌ರವರೆ ಮಾತನಾಡುತ್ತೀರಾ? ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ :- ಮಾತನಾಡಬೇಕಾಗುತ್ತದೆ.

ಶ್ರೀ ಸಿ.ಬೈರೇಗೌಡ :- ಒಂದು ಅಂಶವನ್ನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಅವರ ಮಾತನ್ನು ಕೇಳುವುದಕ್ಕಾಗುವುದಿಲ್ಲ. ಅಧ್ಯಕ್ಷರೆ.

ಅಧ್ಯಕ್ಷರು :- ನನಗೋಸ್ಕರವಾದರೂ ಅವರ ಮಾತನ್ನು ಕೇಳಿ.

ಶ್ರೀ ವಾಟಾಳ್ ನಾಗರಾಜ್ :- ಆಗಲೀ ಕೇಳುತ್ತೇನೆ.

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್ ರವರು ಬಹಳ ವರ್ಷಗಳಿಂದ ಈ ಸದನದಲ್ಲಿ ಇದ್ದಾರೆ. ಇವತ್ತು ಇಲ್ಲಿ ಇರತಕ್ಕ ವಿಷಯ ಪೂರಕ ಬೇಡಿಕೆಗಳ ಬಗ್ಗೆ. ಸಾಮಾನ್ಯವಾಗಿ ಚರ್ಚೆಯ ರೀತಿಯಲ್ಲಿ ಇದನ್ನು ಪಾಸ್ ಮಾಡತಕ್ಕ ವಾಡಿಕೆ ಇದೆ. ಈಗ ವರ್ಷದ ಕೊನೆಯಾಗುತ್ತಿದೆ. ನಾಳೆ ಒಂದು ದಿವಸ ಮಾತ್ರ ಸಮಯವಿರುತ್ತದೆ. ಆದುದರಿಂದ, ಈ ಬೇಡಿಕೆಗಳಿಗೆ ಈ ಮನೆಯ ಒಪ್ಪಿಗೆಯನ್ನು ಪಡೆಯದಿದ್ದರೆ ಏನಾಗುತ್ತದೆ ತಮಗೆ ಗೊತ್ತಿದೆ. ಆದ್ದರಿಂದ ಹಿರಿಯ ಸದಸ್ಯರಾದ ತಾವು ಸಪಕರಿಸಿ ಇದಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ಅಧ್ಯಕ್ಷರ ಮೂಲಕ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಇದೇನು ರಾಜಿ ಕಬೂಲಿಯಲ್ಲ. ಇದನ್ನು ಒಪ್ಪಿಕೊಳ್ಳಿ ಬಹಳ ಕಷ್ಟವಿದೆ ಎಂದು ತಾವು ಹೇಳುವುದು, ಹಣಕಾಸು ಸಚಿವರು ಒಪ್ಪಿಕೊಳ್ಳಿ ಎಂದು ಹೇಳುವುದಕ್ಕೆ ಇದೇನು ರಾಜಿಕಬೂಲಿಯಲ್ಲ. ನಮ್ಮನ್ನು ಸುಮ್ಮನೆ ಇಕ್ಕಟ್ಟಿನಲ್ಲಿ ಸಿಕ್ಕಿಸಬೇಡಿ. ನಾವು ಮಾತನಾಡಬೇಕಾಗಿದೆ. ದಯಮಾಡಿ ಅವಕಾಶ ಕೊಡಿ.

ಅಧ್ಯಕ್ಷರು :- ಅವರು ನಿಮ್ಮೊಬ್ಬರನ್ನೇ ಇಕ್ಕಟ್ಟಿನಲ್ಲಿ ಸಿಕ್ಕಿಸಿಲ್ಲ, ನಿಮ್ಮ ಜೊತೆಗೆ ನನ್ನನ್ನೂ ಸಹ ಸಿಕ್ಕಿಸಿದ್ದಾರೆ.

ಶ್ರೀ ಸಿ.ಬೈರೇಗೌಡ :- ಈ ಸದನದಲ್ಲಿ ಈ ರೀತಿ ಪೂರಕ ಬೇಡಿಕೆಗಳು ಬರುತ್ತಿರತಕ್ಕದ್ದು ಇದೇ ಮೊದಲ ಬಾರಿಯಲ್ಲ. ಈ ಮೊದಲೂ ಸಹ ಅನೇಕ ಸಾರಿ ಬಂದಿದೆ. ಅದಲ್ಲದೆ ಇದರಲ್ಲಿ ಖರ್ಚನ್ನು ಮಾಡಿರತಕ್ಕದ್ದು ನಾವಲ್ಲ. ಇದಕ್ಕೆ ಉತ್ತರವನ್ನು ಕೊಡಬೇಕಾಗಿರತಕ್ಕದ್ದು ಎದುರುಗಡೆ ಕುಳಿತಿರುವವರು. ಅವರ ಪರವಾಗಿ ನಾವು ಇವತ್ತು ಉತ್ತರವನ್ನು ಕೊಡಬೇಕಾಗಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ನಾಳೆ ನೀವು ಸಪ್ಲಿಮೆಂಟರಿ ಬಜೆಟ್‌ಗೆ ಮುಂದಿನ ವರ್ಷ ಬರುವುದಿಲ್ಲವೇ?

ಶ್ರೀ ಸಿ.ಬೈರೇಗೌಡ :- ಬರುತ್ತದೆ. ಒಂದು ರೀತಿಯಲ್ಲಿ ಸಾಂಪ್ರದಾಯಕವಾದ ರೀತಿಯಲ್ಲಿ ಬರುತ್ತಿರುವ ಈ ವ್ಯವಸ್ಥೆಯಲ್ಲಿ ಚರ್ಚೆ ಇಲ್ಲದೆ ಪಾಸ್ ಮಾಡಲು ಅವಕಾಶ

ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :- ಮಾನ್ಯ ನಾಗೇಗೌಡರು ಮಾತನಾಡುತ್ತೀರೋ,

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ಅವರೇಕೆ ಮಾತನಾಡುತ್ತಾರೆ, ಅವರು ಖರ್ಚು ಮಾಡಿರತಕ್ಕದ್ದೆ ಇಲ್ಲಿ ಬಂದಿದೆ.

ಶ್ರೀ ಕೆ.ಎನ್.ನಾಗೇಗೌಡ (ಕಿರುಗಾವಲು):- ಸನ್ಮಾನ್ಯ ಅಧ್ಯಕ್ಷರೇ, ಎಂ.ಡಿ.ಎಸ್.ಎಲ್. ಮತ್ತು ಮೈಶುಗರ್ ಕಂಪನಿಗೆ 1 ಕೋಟಿ 53 ಲಕ್ಷ ಹೆಚ್ಚು ವೆಚ್ಚ ಮಾಡಿದ್ದಾರೆ ಎನ್ನತಕ್ಕ ವಿಚಾರವನ್ನು ಪೂರಕ ಬಜೆಟ್‌ನಲ್ಲಿ ಸೇರಿಸಿದ್ದಾರೆ. ಬರೀ ಮಾರಾಟ ವೆಚ್ಚಕ್ಕಾಗಿ ಒಂದೂವರೆ ಕೋಟಿ ಹೆಚ್ಚು ವೆಚ್ಚವನ್ನು ಮಾಡಿದ್ದಾರೆ. ಎಂ.ಡಿ.ಎಸ್.ಎಲ್.ನಿಂದ ನಮ್ಮ ಲಿಕ್ಕರ್‌ಗಳನ್ನು ತೆಗೆಯಬೇಕು. ಅಲ್ಲಿ ಮಾರಾಟ ಮಾಡಲು ಬಿಡಬಾರದು. ಇವತ್ತು ಒಂದೂವರೆ ಕೋಟಿ ಮಾರಾಟ ವೆಚ್ಚ ಹೆಚ್ಚುವರಿಯಾಗಿದೆ. ಆದ್ದರಿಂದ ನಾವು ಎಂ.ಐ.ಎಸ್.ಎಲ್.ಗೆ ಏನು ಕೊಡುತ್ತಿದ್ದೇವೆ ಅದನ್ನು ವಾಪಸ್ ತೆಗೆದುಕೊಳ್ಳಬೇಕು. ಮಾನ್ಯ ಜಾಲಪ್ಪನವರಿಗೆ ಗೊತ್ತಿರಬಹುದು, 15 20 ವರ್ಷಗಳ ಹಿಂದೆ ಜಿಲ್ಲಾ ಮಟ್ಟದಲ್ಲಿ ನಾವೇನು ಮಾರಾಟ ಮಾಡುತ್ತಿದ್ದೆವೋ ಆ ರೀತಿ ಮಾಡತಕ್ಕ ವ್ಯವಸ್ಥೆ ಮಾಡಿ ಎಂದು ಬಜೆಟ್‌ನಲ್ಲಿ ಭಾಷಣ ಮಾಡಿದ್ದೆ. ಅದೊಂದರಲ್ಲಿ ಒಂದೂವರೆ ಕೋಟಿ ರೂಪಾಯಿ ಹೆಚ್ಚುವರಿಯಾಗಿ ಮಾರಾಟದಲ್ಲಿ ಖರ್ಚು ಮಾಡಿದ್ದೇವೆ. ಆದ್ದರಿಂದ ಎಂ.ಎಸ್.ಐ.ಎಲ್.ಗೆ ಕೊಡತಕ್ಕದ್ದನ್ನು ರದ್ದು ಮಾಡಬೇಕೆಂದು ಮುಂದಿನ ಸಲವಾದರೂ ಯೋಜನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ :- ಅವರು ಕೊಟ್ಟಿರುವ ಸಲಹೆಯನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ವಾಟಾಳ್ ನಾಗರಾಜ್ :- ಈ ಪೂರಕ ಬೇಡಿಕೆಯಲ್ಲಿ ಫೀಲ್ಡ್ ಮಾರ್ಷಲ್ ಕಾರ್ಯಪ್ಪನವರ ಸ್ಮಾರಕದ ಬಗ್ಗೆ ಹೇಳಿದ್ದೀರಿ....

ಶ್ರೀ ಸಿ. ಬೈರೇಗೌಡ :- ಅಲ್ಲಿ ಬಂದಿರತಕ್ಕ ಪೂರಕ ಬೇಡಿಕೆಯೇನಿದೆ ಅದಕ್ಕೆ ಉತ್ತರವನ್ನು ಕೊಡಬೇಕಾಗಿರತಕ್ಕವರು ಆ ಕಡೆ ಕುಳಿತುಕೊಂಡಿರತಕ್ಕವರು. ಯಾರು ಇದ್ದರು ಸಹ ಅವರ ಪರವಾಗಿ ಉತ್ತರವನ್ನು ಕೊಡಬೇಕಾಗುತ್ತದೆ. ನಾವು ಉತ್ತರವನ್ನು ಅವರ ಪರವಾಗಿ ಕೊಡಬೇಕೆಂಬುದನ್ನು ಒಪ್ಪಿಕೊಳ್ಳುತ್ತೇನೆ. ನಾವು ಇಲ್ಲಿದ್ದೇವೆ ಅವರ ಪರವಾಗಿ. ಆದ್ದರಿಂದ ಇದಕ್ಕೆ ಬೇಗನೆ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ತಾವು ಸ್ವಲ್ಪ ಈ ಕಡೆ ಬಂದು ಕುಳಿತುಕೊಳ್ಳಿ, ನಾವು ಅದಕ್ಕೆ ಉತ್ತರವನ್ನು ಕೊಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ :- 1994-95ನೇ ಸಾಲಿನ ಪೂರಕ ಅಂದಾಜಿನಲ್ಲಿ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪನವರ ಸ್ಮಾರಕ ಮಾಣಿಕ್ ಶಾ ಪೆರೇಡ್ ಮೈದಾನದಲ್ಲಿ

ಮಾಡಬೇಕು ಎನ್ನತಕ್ಕದಕ್ಕೆ ಹಣವನ್ನು ಒದಗಿಸತಕ್ಕಂಥದ್ದು. ಇವರು ನಮ್ಮ ದೇಶದ ಮೊದಲನೆಯ ದಂಡನಾಯಕರು. ಮತ್ತು ಮಹತ್ತರವಾದಂಥ ಸೇವೆ ಮಾಡಿದಂಥ ಕನ್ನಡದ ಗಂಡು ಮೆಟ್ಟಿದ ನೆಲ ಕೊಡಗಿನ ವೀರರು. ಈ ಸ್ಮಾರಕದ ಜೊತೆಗೆ ಇನ್ನು ಕೆಲವರ ಸ್ಮಾರಕಗಳ ಬಗ್ಗೆ ಈ ಸಂದರ್ಭದಲ್ಲಿ ನಾವು ಮಾತನಾಡಬೇಕಾಗಿದೆ. ಮಾನ್ಯ ಕಾರ್ಯಪ್ಪನವರು ಸ್ಮಾರಕ ಅತ್ಯಂತ ದೊಡ್ಡದಾಗಿ ಆಗಬೇಕು. ಮತ್ತು ಪ್ರಪಂಚದಲ್ಲಿ ಇದೊಂದು ಮಾದರಿಯಾಗಿದ್ದು ಪ್ರಪಂಚದ ಎಲ್ಲರ ಗಮನವನ್ನು ಸೆಳೆಯತಕ್ಕಂಥ ಸ್ಮಾರಕವಾಗಬೇಕು. ಇದರ ಜೊತೆಗೆ ಬೇರೆ ಕೆಲವು ಹಿರಿಯರ ಬಗ್ಗೆ ಸಹ ಸ್ಮಾರಕಗಳು ಮತ್ತು ನೆನಪಿನ ಪ್ರತಿಮೆಗಳನ್ನು ಹಾಕಬೇಕು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಇದಕ್ಕೂ ಸಹ ಹಣವನ್ನು ಒದಗಿಸಬೇಕೆಂದು ಈಗ ಸರ್ಕಾರಕ್ಕೆ ಹೇಳುತ್ತೇನೆ. ಕಾರ್ಯಪ್ಪನವರ ಬಗ್ಗೆ ಹಿಂದಿನ ಸರ್ಕಾರ ತೆಗೆದುಕೊಂಡಿರತಕ್ಕ ನಿರ್ಧಾರ. ಈಗಿನ ಸರ್ಕಾರದವರು ನಾವಲ್ಲ ಅವರು ಎಂದು ಹೇಳುತ್ತಿದ್ದಾರೆ. ನಾನು ತಮಗೆ ಹೇಳುತ್ತಿರುವುದೇನೆಂದರೆ, ವಿಧಾನಸೌಧದ ಮುಂದೆ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರ ಪ್ರತಿಮೆ ನಿರ್ಮಾಣವಾಗಿದೆ, ಅದರ ಸ್ವಲ್ಪ ದೂರದಲ್ಲಿ ಶ್ರೀಮಾನ್ ದೇವರಾಜ ಅರಸುರವರ ಪ್ರತಿಮೆ ನಿರ್ಮಾಣವಾಗಿದೆ. ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ದೇವರಾಜ ಅರಸುರವರ ಪ್ರತಿಮೆ ಅಷ್ಟು ಚೆನ್ನಾಗಿ ಬರಲಿಲ್ಲ. ಆ ಪ್ರತಿಮೆ ಕೆ.ಆರ್.ನಗರದ ಶಾಸಕರಾದ ಕೆಂಚೇಗೌಡರನ್ನು ಸ್ವಲ್ಪ ಹೆಚ್ಚು-ಕಡಿಮೆ ಹೋಲುತ್ತದೆಂದು ಹೇಳಿದ್ದೆ. ದೇವರಾಜ ಅರಸುರವರ ಪ್ರತಿಮೆಯನ್ನು ಬಹಳ ತರಾತುರಿಯಲ್ಲಿ, ಆತುರಾತುರವಾಗಿ ಮಾಡಿಸಿದರು. ಅದನ್ನು ಒಂದು ಸುಂದರ ಪ್ರತಿಮೆಯಾಗಿ ಮಾಡಿಸಬಹುದಿತ್ತು. ನೀವು ದೇವರಾಜ ಅರಸುರವರನ್ನು ಬಹಳ ಹತ್ತಿರದಿಂದ ನೋಡಿರತಕ್ಕಂಥವರು. ಅವರ ಪ್ರತಿಮೆ ಎತ್ತರವಾಗಿರದೆ ಕಡಿಮೆಯಾಗಿದ್ದು, ಕತ್ತು ಸಹ ಕಡಿಮೆಯಾಗಿದೆ ಮತ್ತು ನಿಂತಿರುವ ಶೈಲಿ.....

ಶ್ರೀ ಆರ್.ಎಲ್.ಜಾಲಪ್ಪ :- ಈಗಲೂ ಕಾಲ ಮಿಂಚಿಲ್ಲ, ಹಾಕಿರುವ ಪ್ರತಿಮೆ ತೆಗೆಸಿ ಸುಂದರವಾದ ಬೇರೆ ಪ್ರತಿಮೆ ಮಾಡಿಸೋಣ.

ಶ್ರೀ ವಾಟಾಳ್ ನಾಗರಾಜ್ :- ನಾನು ಜಾಲಪ್ಪನವರ ಮಾತನ್ನು ಸ್ವಾಗತಿಸುತ್ತೇನೆ. ಈಗಿರುವ ಪ್ರತಿಮೆಯನ್ನು ತೆಗೆಸಿ ಸುಂದರವಾಗಿರುವ ಮತ್ತೊಂದು ಪ್ರತಿಮೆ ಹಾಕಿಸಬೇಕೆನ್ನುವುದು ಒಂದು ವಾದವಾಗಿದೆ. ಇದು ನಮ್ಮೆಲರ ಪ್ರಾಮಾಣಿಕ ಅಭಿಪ್ರಾಯವಾಗಿದೆ. ದೇವರಾಜ ಅರಸುರವರ ಪ್ರತಿಮೆಯನ್ನು ನೋಡಿದಾಕ್ಷಣ ಅವರು ದೇವರಾಜ ಅರಸರೆಂದು ಕಾಣಬೇಕು. ಅಂತಹ ಸುಂದರವಾದ ಪ್ರತಿಮೆಯನ್ನು ಸರ್ಕಾರ ಮಾಡಿಸುವುದಕ್ಕೆ ಗಮನ ಹರಿಸಬೇಕು.

ಒಬ್ಬ ಮಾನ್ಯ ಸದಸ್ಯರು :- ಈಗಿರುವ ಪ್ರತಿಮೆಯನ್ನು ಏನು ಮಾಡುವುದು?

ಶ್ರೀ ವಾಟಾಳ್ ನಾಗರಾಜ್ :- ಅದನ್ನು ವಸ್ತು ಸಂಗ್ರಹಾಲಯದಲ್ಲಿಡಬಹುದು, ಏನೂ ತೊಂದರೆಯಿಲ್ಲ.

ಒಬ್ಬ ಮಾನ್ಯ ಸದಸ್ಯರು :- ವಸ್ತು ಸಂಗ್ರಹಾಲಯದಲ್ಲಿ ಕೆಂಚೇಗೌಡರ ಪ್ರತಿಮೆಯನ್ನೂ ಇಡಬೇಕೆ?

ಶ್ರೀ ವಾಟಾಳ್ ನಾಗರಾಜ್ :- ನಾನು ಮಾತನಾಡಿದ ನಂತರ ನೀವೆಲ್ಲಾ ಮಾತನಾಡಿ ಎಂದು ಆದಕ್ಕೆ ನಿಮ್ಮನ್ನೆಲ್ಲಾ ಕರೆದಿದ್ದು. ನಾನು ಈಗ ಮಾತನಾಡುವುದಕ್ಕೆ ಎದ್ದಾಗ ನೀವು ಏನೇನೋ ಮಾತನಾಡುತ್ತಿದ್ದೀರಿ. ನಾನು ಮಾತನಾಡಿದ ನಂತರ ನಿಮಗೆಲ್ಲರಿಗೂ ಮಾತನಾಡುವುದಕ್ಕೆ ಅವಕಾಶವಿದೆ. ಆಗ ನೀವುಗಳೆಲ್ಲರೂ ಒಂದು ಕಡೆಯಿಂದ ನಿಂತು ಮಾತನಾಡಿ.

ಅಧ್ಯಕ್ಷರು :- ವಾಟಾಳ್ ನಾಗರಾಜ್‌ರವರೇ, ನೀವು ಯಾರಿಗೆ ಬೆಂಬಲ ಕೊಡುತ್ತೀರೋ, ಅವರೆಲ್ಲಾ ನಿಮ್ಮ ವಿರುದ್ಧವಾಗಿದ್ದಾರೆ. ಇದು ನಿಮ್ಮ ಹಣೆಬರಹ.

ಶ್ರೀ ವಾಟಾಳ್ ನಾಗರಾಜ್ :- ನಮ್ಮ ಪರವಾಗಿ ಇಲ್ಲಿರುವವರೆಂದರೆ ನೀವೊಬ್ಬರೇ. ಇದು ನಮ್ಮ ಪರಿಸ್ಥಿತಿ. ಒಂದಲ್ಲ ಒಂದು ರೀತಿಯಲ್ಲಿ ಅವರು ನಮಗೆ ಶತ್ರುಗಳೇ ಆಗುತ್ತಾರೆ. ಈಗ ಕೃಷಿ ಮಂತ್ರಿಗಳಾಗಿರುವ ಶ್ರೀ ಬೈರೇಗೌಡರಿಗೆ ನಾನು ಮಾಡಿರುವಷ್ಟು ಉಪಕಾರ ಅದು ನಮ್ಮಿಬ್ಬರಿಗೇ ಗೊತ್ತು. ಇದನ್ನು ಅವರು ಬಹಿರಂಗಪಡಿಸಬಾರದು. ಅವರು ಈ ಕಡೆ ಕುಳಿತಿದ್ದಂಥ ಸಂದರ್ಭದಲ್ಲಿ ಪ್ರತಿ ದಿನವೂ ನನ್ನ ಪಕ್ಕದಲ್ಲೇ ಕುಳಿತುಕೊಂಡಿರುತ್ತಿದ್ದರು, ಒಂದು ದಿನವೂ ಸಹ ನನ್ನನ್ನು ಬಿಟ್ಟಿರುತ್ತಿರಲಿಲ್ಲ. ಈಗ ಅವರು ಮಂತ್ರಿಯಾದ ಬಳಿಕ ನನ್ನನ್ನು ಒಂದು ನಿಮಿಷವೂ ಭೇಟಿ ಮಾಡಲಿಲ್ಲ. ಇನ್ನು ಅರ್ಥ ಸಚಿವರಾದರೂ ವಾರಕ್ಕೆ ನಾಲ್ಕು ಬಾರಿಯಾದರೂ ಲಾಬಿಗೆ ಬಂದು ನನ್ನ ಜೊತೆಯಲ್ಲಿ ಕನಿಷ ಪಕ್ಷ ಹತ್ತು ನಿಮಿಷವಾದರೂ ಮಾತನಾಡಿ ಮುಗುಳ್ನಗೆ ಬೀರಿ ಹೋಗುತ್ತಿದ್ದವರು ಇವೊತ್ತು ನನ್ನನ್ನು ಕರೆದು ಮಾತನಾಡುವಷ್ಟು ಸೌಜನ್ಯವಿಲ್ಲ. ಇದರಿಂದ ನನಗೆ ಎಷ್ಟು ನೋವಾಗುತ್ತದೆಂದರೆ, ನಮ್ಮ ಜಿಲ್ಲೆಯವರಾದ ಅವರು ಆಯವ್ಯಯ ಪತ್ರವನ್ನು ಮೊದಲ ಬಾರಿಗೆ ಮಂಡಿಸಿದ್ದಾರೆ, ನಾನು ಅವರ ಮೇಲೆ ಬಿದ್ದು ತೊಂದರೆ ಕೊಡುವುದೆಂದು ಏಕೆಂದು.....

ಶ್ರೀ ಸಿ.ಬೈರೆಗೌಡ :- ನಿಮಗೆ ದಂಡ ಕೊಡುವುದಕ್ಕೆ ಈಗಾಗಲೇ ತೀರ್ಮಾನವಾಗಿರುವುದರಿಂದ ದಂಡ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೆ, ನೀವೊಬ್ಬರೇ ನಮಗೆ ರಕ್ಷಣೆ ಕೊಡಬೇಕು. ನಿಮಗೆಲ್ಲಾ ಗೊತ್ತಿರುವಂತೆ ನಂಜೇಗೌಡರು ನಮ್ಮ ಕೈಬಿಟ್ಟರು. ಅಧಿಕಾರಕ್ಕೆ ಬರುವ ಮುಂಚೆ ಒಂದು ತರಹ ಇದ್ದವರು, ಅಧಿಕಾರಕ್ಕೆ ಬಂದನಂತರ ನಮ್ಮ ಕೈಬಿಟ್ಟರು. ಈಗಲೇ ಎಂ.ಎಲ್.ಎ.ಆಗಿ ಅವರು ಈ ರೀತಿಯಾದರೆ, ಮುಂದೆ ಮುಖ್ಯ ಮಂತ್ರಿಯಾದರೆ ನಮ್ಮ ಗತಿ ಏನಾಗಬೇಕು? ಅವರು ಮುಖ್ಯ ಮಂತ್ರಿಯಾದರೆ ದೇವೇಗೌಡರ ಅಪ್ಪನಾಗಿ ಬಿಡುತ್ತಾರಷ್ಟೆ. ಮಾನ್ಯ ಅಧ್ಯಕ್ಷರೆ, ದೇವರಾಜ ಅರಸರವರು ಈ ರಾಜ್ಯಕ್ಕೆ ಕರ್ನಾಟಕವೆಂದು ನಾಮಕರಣ ಮಾಡಿದ ಒಬ್ಬ ಧೀಮಂತ ನಾಯಕರು ಮತ್ತು ಇತಿಹಾಸದಲ್ಲಿ ಬರುವ

ಒಂದು ಪರಮ, ಪವಿತ್ರವಾದ ವ್ಯಕ್ತಿತ್ವ ಅವರದು. ಆದುದರಿಂದ.....

(ಈ ಹಂತದಲ್ಲಿ ಒಬ್ಬ ಮಾನ್ಯ ಸದಸ್ಯರು ವಾಟಾಳ್ ನಾಗರಾಜ್ ರವರ ಭಾಷಣಕ್ಕೆ ಅಡ್ಡಿಪಡಿಸುತ್ತಿದ್ದರು)

ಮಾತನಾಡಿದರೂ ಕಷ್ಟ, ಮಾತನಾಡದಿದ್ದರೂ ಕಷ್ಟವಾಯಿತಲ್ಲ.

ಒಬ್ಬ ಮಾನ್ಯ ಸದಸ್ಯರು :- ಮಾತನಾಡುವುದಕ್ಕೆ ವಿಷಯವೇ ಇಲ್ಲವಲ್ಲಾ:

ಶ್ರೀ ವಾಟಾಳ್ ನಾಗರಾಜ್ :- ಕೇಳಿದಿರಾ, ವಿಷಯವೇ ಇಲ್ಲವಂತೆ. ಆರು ಹೆತ್ತವಳ ಮುಂದೆ ಮೂರು ಹೆತ್ತವಳು ಮಾತನಾಡಿದಂತಾಯಿತು. ಬಂಜೆಯಾದವಳು ಮಗುವಿನ ಬಗ್ಗೆ ಮಾತನಾಡುತ್ತಾಳೆ. ಮಗು ಹೀಗಿರಬೇಕು, ಹಾಗಿರಬೇಕು, ತಲೆಗೆ ಎಣ್ಣೆ ಹಾಕಬೇಕು....

ಶ್ರೀ ಸಿದ್ಧರಾಮಯ್ಯ :- ಬಂಜೆಯಾದವಳು ಕೂಡ ಮಗುವಿನ ಬಗ್ಗೆ ಮಾತನಾಡುವುದಕ್ಕೆ ಅಧಿಕಾರವಿಲ್ಲವೇ?

ಶ್ರೀ ಬಿ.ಬಿ.ಶಿವಕುಮಾರ್ :- ವಾಟಾಳ್ ನಾಗರಾಜ್ರವರೇ, ಬಂಜೆಗೇನು ಗೊತ್ತು ಪ್ರಸವ ವೇದನೆ ಎಂದು ಹೇಳಿ.

ಅಧ್ಯಕ್ಷರು :- ಶಿವಕುಮಾರ್ರವರೇ, ಹೆರಿಗೆ ಬಗ್ಗೆ ಮಾತನಾಡುವುದಕ್ಕೆ ಇವರು ಯಾರು? ಎಂದು ಪ್ರಮೀಳಾ ನೇಸರ್ಗಿಯವರು ಕೇಳುತ್ತಿದ್ದಾರೆ.

ಶ್ರೀ ಪ್ರಮೀಳಾ ನೇಸರ್ಗಿ :- ಖಂಡಿತವಾಗಿಯೂ, ಅವರು ಬೇಕಾದ್ದು ಮಾತನಾಡಲಿ. ಈ ವೈಜ್ಞಾನಿಕ ಯುಗದಲ್ಲಿ ಎಲ್ಲವನ್ನು ಸಾಧಿಸಲಾಗಿದೆ. ಆದರೆ, ಇದೊಂದು ಮಾಡುವುದಕ್ಕಾಗಿಲ್ಲ. ಇವರು ಏನೇ ಶತ ಪ್ರಯತ್ನ ಮಾಡಿದರೂ ಹೆಣ್ಣಾಗುವುದಕ್ಕೆ ಸಾಧ್ಯವಿಲ್ಲ. ಆದುದರಿಂದ, ಬಂಜೆ ಬಗ್ಗೆ ಮಾತನಾಡುವುದಕ್ಕೆ ನಿಮಗೆ ಹಕ್ಕಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಹೆಣ್ಣು ಮಾಯೆ ಎಂದರು, ಆದುದರಿಂದ ಹೆಣ್ಣಾಗುವುದಕ್ಕೆ ಸಾಧ್ಯವಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ :- ಹೆಣ್ಣು ಮಾಯೆ ಎಂಬರು, ಹೆಣ್ಣು ಮಾಯೆಯಲ್ಲ, ಗಂಡು ಮಾಯೆ ಎಂಬರು, ಗಂಡು ಮಾಯೆಯಲ್ಲ.

ಶ್ರೀ ವಾಟಾಳ್ ನಾಗರಾಜ್ :- ಹೊನ್ನು ಮಾಯೆ ಎಂಬರು, ಹೊನ್ನು ಮಾಯೆಯಲ್ಲ, ಮನದ ಮುಂದಣ ಆಸೆಯೇ ಮಾಯೆ ಕಾಣಾ.....

ಶ್ರೀಮತಿ ಪ್ರಮೀಳಾ ನೇಸರ್ಗಿ :- ಎಂದು ಬಸವಣ್ಣನವರು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :-.....ಮುಂದೇ ಹೇಳಿ.

ಅಧ್ಯಕ್ಷರು :- ನಿಮಗೂ ಬರುವುದಿಲ್ಲ, ಅವರಿಗೂ ಬರುವುದಿಲ್ಲ, ಕುಳಿತುಕೊಳ್ಳಿ.

ಶ್ರೀಮತಿ ಪ್ರಮೀಳಾ ನೇಸರ್ಗಿ :- ನಿಜವಾಗಿಯೂ ಈಗ ಚೆನ್ನಮಲ್ಲಿಕಾರ್ಜುನ ಬರಲೇಬೇಕಾಗಿದೆ. ಏಕೆಂದರೆ, ಮಹಾಚೈತ್ರ ದಂಥ ಪುಸ್ತಕ ತಂದು, ಅದರಲ್ಲಿ ಅಕ್ಕಮಹಾದೇವಿಗೆ ಅನ್ನಬಾರದ್ದೆಲ್ಲಾ ಅಂದು ಎಷ್ಟು ಅವಮಾನ ಮಾಡಿದ್ದಾರೆಂದರೆ, ಇವ್ಹೊತ್ತು ಆ ವಿಷಯದ ಬಗ್ಗೆ ಮಾತನಾಡುವ ಸಂದರ್ಭ ಒದಗಿಬಂದಿದೆ. ಆದುದರಿಂದ, ಚೆನ್ನಮಲ್ಲಿಕಾರ್ಜುನ ಬರಲೇಬೇಕಾಗಿದೆಯೆನ್ನುವುದನ್ನು ತಾವು ದಯವಿಟ್ಟು ತಿಳಿದುಕೊಳ್ಳಬೇಕು.

ಶ್ರೀ ಎಂ.ಪಿ.ಪ್ರಕಾಶ್ :- ಅಧ್ಯಕ್ಷರೆ, ಈ ತರಹದ ಅಪ್ರಸ್ತುತ ವಿಷಯಗಳನ್ನು ಇಲ್ಲಿ ತರಬಾರದು.

ಅಧ್ಯಕ್ಷರು :- ನಮ್ಮ ಅಸಹಾಯಕತೆ ನೋಡಿ ವಾಟಾಳ್ ನಾಗರಾಜ್‌ರವರೆ ಸಹಾಯ ಮಾಡೋಣವೆಂದು ನಿಂತುಕೊಂಡರು, ನಾಗೇಗೌಡರು ಅವರಿಗೆ ತೊಂದರೆ ಕೊಟ್ಟರು. ಆದುದರಿಂದ, ವಿಷಯ ಎಲ್ಲೆಲ್ಲಿಗೋ ಹೋಯಿತು.

ಶ್ರೀ ವಾಟಾಳ್ ನಾಗರಾಜ್:- ನಾವು ಯಾರೂ ಕುಳಿತುಕೊಳ್ಳುವುದಿಲ್ಲ. ನಿಮಗೆ ಸೌಜನ್ಯ ತೋರಿಸಲು ಕುಳಿತುಕೊಂಡರೆ ಯದ್ವಾತದ್ವಾ ಮಾತನಾಡುತ್ತಿದ್ದೀರಲ್ಲಾ?

ಶ್ರೀಮತಿ ಪ್ರಮೀಳಾ ನೇಸರ್ಗಿ :- ಯಾರಿಗೆ ಹೇಳಿದಿರಿ ನೀವು? ನಾವು ಇಲ್ಲಿ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಬಂದಿಲ್ಲ. ಅಧ್ಯಕ್ಷರು ನಮಗೆ ರಕ್ಷಣೆ ಕೊಡಬೇಕು. ನಾವು ಯದ್ವಾತದ್ವಾ ಮಾತನಾಡುವುದಕ್ಕೆ ಇಲ್ಲಿಗೆ ಬಂದಿಲ್ಲ. ಇರುವುದನ್ನು ಇದ್ದ ಹಾಗೆ ಸ್ಪಷ್ಟವಾಗಿ ಹೇಳುವುದಕ್ಕೋಸ್ಕರ ಈ ಸದನಕ್ಕೆ ಬಂದಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ :- ನಾನು ಸಾಮಾನ್ಯವಾಗಿ ಮಹಿಳೆಯರ ಮೇಲೆ ಯುದ್ಧಕ್ಕೆ ಹೋಗುವುದಿಲ್ಲ. ನಿಮ್ಮ ಮೇಲೆ ನನಗೆ ವಿಶ್ವಾಸವಿದೆಯೆಂದು ನಿಮಗೆ ಹೊತ್ತಿಲ್ಲವೇ? ಇಷ್ಟು ಬೇಗ ನಮ್ಮ ಮೇಲೆ ದಾಳಿ ಮಾಡಿದರೆ ಹೇಗೆ?

ಶ್ರೀಮತಿ ಪ್ರಮೀಳಾ ನೇಸರ್ಗಿ :- ಅವರ ಕ್ಷೇತ್ರ ಚಾಮರಾಜನಗರ, ನಮ್ಮ ಕ್ಷೇತ್ರ ಚಾಮರಾಜಪೇಟೆ. ಆದರೆ, ಈ ಸಭೆಯಲ್ಲಿ ನಗರಕ್ಕೆ ಹೆಚ್ಚು ಪ್ರಾಶಸ್ತ್ಯ ಸಿಗುತ್ತಿದೆ, ಪೇಟೆಗೆ ಸಿಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಆಯ-ವ್ಯಯದಲ್ಲಿ ಹಳ್ಳಿಗಾಡಿಗೆ ಹೆಚ್ಚು ಪ್ರಾಶಸ್ತ್ಯ

ಕೊಟ್ಟಿರುವುದರಿಂದ ನಾವು ಆದರ ಬಗ್ಗೆ ಮಾತನಾಡುತ್ತಿದ್ದೇವೆಯೋ ಹೊರತು ಪಟ್ಟಣದ ಬಗ್ಗೆ ಮಾತನಾಡತಕ್ಕಂಥಾದ್ದು ಬೇಕಾಗಿಲ್ಲ. ವಿಷಯಕ್ಕೆ ಬರುವುದಾದರೆ, ದೇವರಾಜ ಅರಸುರವರ ಪ್ರತಿಮೆಯನ್ನು ಅಲ್ಲಿಂದ ತೆಗೆದು ಬೇರೊಂದು ಸುಂದರವಾದ ಪ್ರತಿಮೆ ಮಾಡಿಸಿ ಅನಾವರಣಗೊಳಿಸಬೇಕೆಂಬುದು ನನ್ನ ವಾದ. ಹಿಂದಿನ ಸರ್ಕಾರದಲ್ಲಿ ಕರ್ನಾಟಕ ಏಕೀಕರಣಕ್ಕೆ ಮಹತ್ತರವಾದ ಸೇವೆ ಸಲ್ಲಿಸಿ, ನಾಡಿನ ಉದ್ದಗಲಕ್ಕೂ ದುಡಿದು, ದೇಶದ ಮಹಾ ನಾಯಕರಲ್ಲೊಬ್ಬರಾದ ಶ್ರೀಮಾನ್ ಸಿದ್ಧವನಹಳ್ಳಿ ನಿಜಲಿಂಗಪ್ಪನವರ ಪ್ರತಿಮೆಯನ್ನು ಹಾಕಬೇಕೆಂಬ ನನ್ನ ವಾದವನ್ನು ಹೇಳಿದ್ದೆ.

ಶ್ರೀ ಎಂ.ಪಿ.ಪ್ರಕಾಶ್ :- ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿಗಳಾಗಿದ್ದಂಥ ಕಾಲದಲ್ಲಿ ಇದರ ಬಗ್ಗೆ ಸರ್ಕಾರದ ನಿರ್ಣಯವೂ ಆಗಿದೆ.

ಶ್ರೀ ವಾಟಾಳ್ ನಾಗರಾಜ್ :- ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಎಂದರೆ ನಿನ್ನೆ ಅವರು ಇರಲಿಲ್ಲ. ಇದರ ಬಗ್ಗೆ 11 ವರ್ಷದ ಹಿಂದೆ ನಿರ್ಣಯವಾಗಿತ್ತೆಂದು ಹೇಳಿದರೆ ನಿನ್ನೆ ಮಾಡಿದ ನಿರ್ಣಯವೇ ಸರ್ಕಾರದಲ್ಲಿ ಸಿಗುವುದಿಲ್ಲ. ಇನ್ನು ಹನ್ನೊಂದು ವರ್ಷಗಳ ಹಿಂದೆ ಮಾಡಿದ ನಿರ್ಣಯವನ್ನು ಎಲ್ಲಿಟ್ಟಿದ್ದೀರಿ? ತಾವು ಅದನ್ನು ಹುಡುಕಿಸಿ, ತೆಗೆಸಬೇಕು. ಇದಕ್ಕೊಂದು ಸಮಿತಿ ರಚನೆಯಾಗಬೇಕು. ಈ ವಿಚಾರವನ್ನು ಇಲ್ಲಿಗೇ ಬಿಟ್ಟುಬಿಡೋಣ. ಆದುದರಿಂದ, ಪ್ರಾಮಾಣಿಕವಾಗಿ ಅವರ ಪ್ರತಿಮೆಯನ್ನು ಮಾಡಿಸುವಂಥ ನಿರ್ಧಾರವನ್ನು ತಾವು ಕೈಗೊಳ್ಳಬೇಕು. ಇದರ ಜೊತೆಗೆ ರಾಜ್ಯದ ಪ್ರಪ್ರಥಮ ಮುಖ್ಯ ಮಂತ್ರಿಯಾಗಿದ್ದ ಶ್ರೀ ಕ್ಯಾಸಂದಳ್ಳಿ ಚೆಂಗಲರಾಯರೆಡ್ಡಿಯವರನ್ನು ಯಾರೂ ಗಮನಿಸಲೇ ಇಲ್ಲ. ಕೆ.ಸಿ.ರೆಡ್ಡಿಯವರು ಸ್ವಾತಂತ್ರ್ಯ ಹೋರಾಟದಲ್ಲಿ, ಈ ರಾಜ್ಯದ ಬೆಳವಣಿಗೆಯಲ್ಲಿ ಅಪಾರ ಪಾತ್ರ ವಹಿಸಿದ್ದರು. ಅವರು ಕೇಂದ್ರದಲ್ಲಿ ಮಂತ್ರಿಗಳಾಗಿ ಕರ್ನಾಟಕಕ್ಕೆ ಕೈಗಾರಿಕೆಗಳು ಬರುವುದಕ್ಕೆ ಬಹಳ ಉತ್ತಮವಾದ ಕೆಲಸ ಮಾಡಿದಂತಹವರು. ಅವರ ಪ್ರತಿಮೆಯನ್ನು ನಿರ್ಮಿಸುವ ಬಗ್ಗೆ ಸರ್ಕಾರ ತೀವ್ರವಾಗಿ ಕ್ರಮ ಕೈಗೊಳ್ಳಬೇಕು. ಇದರ ಜೊತೆಗೆ ಸಾಹುಕಾರ್ ಚೆನ್ನಯ್ಯನವರು, ನಾನು ತಮಗೆ ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಸ್ವಾತಂತ್ರ್ಯ ಹೋರಾಟದಲ್ಲಿ ಬಹಳ ಅದ್ವಿತೀಯವಾಗಿರತಕ್ಕಂಥ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಿದಂತಹ ಒಬ್ಬ ಧೀಮಂತ ಶಕ್ತಿ ಅವರ ಪ್ರತಿಮೆ ಆಗಬೇಕು ಎಂದು ನನ್ನ ವಾದ. ಈ ಬಗ್ಗೆ ಸ್ಥಿರ ಪರಿಣಾಮಕಾರಿಯಾಗಿ ಕ್ರಮವನ್ನು ಕೈಗೊಳ್ಳಬೇಕು ಮತ್ತು ಶ್ರೀಮಾನ್ ಎಸ್.ನಿಜಲಿಂಗಪ್ಪನವರ ಹುಟ್ಟು ಹಬ್ಬವನ್ನು ಸರ್ಕಾರವೇ ನೇರವಾಗಿ ಮಾಡಬೇಕೆಂದು ಸರ್ಕಾರಕ್ಕೆ ನಾನು ಹೇಳುತ್ತಿದ್ದೇನೆ. ಆದ್ದರಿಂದ ತಾವು ಮಾಡಬೇಕು. ಈ ಒಂದು ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಹೇಳಿ ಇನ್ನೂ ಈ ಪೂರಕ ಅಂದಾಜುಗಳ ಬಗ್ಗೆ ಅನೇಕ ವಿಚಾರಗಳನ್ನು ಮಾತನಾಡಬೇಕು ಎಂದು ಇದ್ದೇನೆ. ಆಂದರೆ ಇವರು ಬಹಳ ತೀವ್ರವಾದ ಅಡ್ಡಿ ಆತಂಕಗಳನ್ನು ಪಡಿಸಿ ಪ್ರಜಾಪ್ರಭುತ್ವಕ್ಕೆ ಕಳಂಕ ತರತಕ್ಕ ರೀತಿಯಲ್ಲಿ ಮಾನ್ಯ ಸದಸ್ಯರು ವರ್ತಿಸಿದ್ದಾರೆ. ಆದರಿಂದ ನನಗೆ ಬಹಳ ನೋವಾಗಿದೆ. ಆದ್ದರಿಂದ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ.ಎಸ್.ವಿಜಯಾ ಶಂಕರ್:- ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ವಾಟಾಳ್ ನಾಗರಾಜ್ ಅವರು ಏನು ಸಲಹೆ ಕೊಟ್ಟರು, ಆ ಸಲಹೆಗೆ ನಮ್ಮ ಸಮ್ಮತಿಯನ್ನೂ ಕೂಡ ಸೂಚಿಸುತ್ತೇನೆ.

ಹಿಂದುಳಿದ ವರ್ಗದ ನೇತಾರರು ಈ ರಾಜ್ಯದಲ್ಲಿ ಹೊಸ ರಾಜಕೀಯ ಚರ್ಚೆಯನ್ನು ಪ್ರಾರಂಭ ಮಾಡಿದಂತಹ ಸನ್ಮಾನ್ಯ ದೇವರಾಜ ಅರಸ್ ಅವರ ಪ್ರತಿಮೆ ಇನ್ನೊಂದು ಸಲ ಅನಾವರಣ ಆಗಬೇಕೆಂಬ ಸಲಹೆ ಏನು ಸರ್ಕಾರದ ಮುಂದೆ ಇಟ್ಟಿದ್ದಾರೆ, ಅವರಿಗೆ ಗೌರವ ಸೂಚಿಸುವುದಕ್ಕೋಸ್ಕರ ಆ ವಿಷಯವನ್ನು ಮಾನ್ಯ ಮಾಡಿ ಇನ್ನೊಂದು ಸಲ ವ್ಯವಸ್ಥಿತವಾಗಿ ಅವರ ಪ್ರತಿಮೆಯನ್ನು ಅನಾವರಣಗೊಳಿಸಲಿಕ್ಕೆ ಸರ್ಕಾರ ಗಮನ ಕೊಡಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ.

ಬೇಡಿಕೆಗಳನ್ನು ಮತಕ್ಕೆ ಹಾಕುವುದು

ಅಧ್ಯಕ್ಷರು:- 1994-95ನೇ ಸಾಲಿನ ಪೂರಕ ಅಂದಾಜುಗಳ (ಎರಡನೇ ಕಂತು) ಬೇಡಿಕೆಗಳ ಮೇಲಿನ ಚರ್ಚೆ ಮುಕ್ತಾಯವಾಯಿತು.

ಶ್ರೀ ಸಿದ್ದರಾಮಯ್ಯ (ಹಣಕಾಸಿನ ಸಚಿವರು):- ಮಾನ್ಯ ಅಧ್ಯಕ್ಷರೆ, ಬೇಡಿಕೆಗಳನ್ನು ಅಂಗೀಕಾರ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, ದಿನಾಂಕ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 5, 9, 10, 13, 17, 21, 27, 28, 34, 36, 41, 42, 43, 47, 48 ಹಾಗೂ 51 ಇವುಗಳಿಗೆ ಸಂಬಂಧಿಸಿದಂತೆ, ಸಂಚಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮುಂಜೂರು ಮಾಡುವುದು

ಪ್ರಸ್ತಾವವು ಅಂಗೀಕಾರವಾಯಿತು ಮತ್ತು ಬೇಡಿಕೆಗಳಿಗೆ ಅನುಮೋದನೆ ದೊರಕಿತು

1994-95ನೇ ಸಾಲಿನ ಪೂರ ಅಂದಾಜುಗಳ (ಅಂತಿಮ ಪಟ್ಟಿ)

ಶ್ರೀ ಸಿದ್ದರಾಮಯ್ಯ (ಹಣಕಾಸು ಸಚಿವರು):- ಮಾನ್ಯ ಅಧ್ಯಕ್ಷರೇ, ದಿನಾಂಕ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ: 1, 2, 3, 5, 6, 7, 9, 10, 13, 14, 15, 16, 17, 19, 21, 21, 23, 24, 25, 28, 29, 30, 31, 32, 34, 35, 36, 38, 40, 41, 42, 43, 44, 46, 47, 48, 50, 51, 52, 55, 57, 58, 60 ಮತ್ತು 61 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆ ಮುಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ; ದಿನಾಂಕ 31.3.1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ: 1, 2, 3, 5, 6, 7, 9, 10, 13, 14, 15, 16, 17, 19, 20, 21, 23, 24, 25, 28, 29, 30, 31, 32, 34, 35, 36, 38, 40, 41, 42, 43, 44, 46, 47, 48, 50, 51, 52, 55, 57, 58, 60 ಮತ್ತು 61 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುವುದು .

ಮಾನ್ಯ ವಾಟಾಳ್ ನಾಗರಾಜ್ ಅವರೇ ಅಂತಿಮ ಕಂತು ಮಾತನಾಡುವುದಿಲ್ಲವೇ?

ಶ್ರೀ ಎನ್.ಯೋಗೀಶ್ ಭಟ್:- ಮಾನ್ಯ ಅಧ್ಯಕ್ಷರೆ, ನಿಮಗೆ ಈಗಲೇ ಪುಸ್ತಕ ಸಿಕ್ಕಿರುವುದರಿಂದ ಹೆಚ್ಚಿನ ಮಾಹಿತಿ ತೆಗೆದುಕೊಳ್ಳಲು ಆಗುವುದಿಲ್ಲ. ಆದರೂ ಕೂಡ ಇದರಲ್ಲಿ ವಿಶೇಷವಾಗಿ 516 ಕೋಟಿ ರೂಪಾಯಿಗಳಿಗೆ ಸಂಬಂಧಪಟ್ಟಂತೆ ಪ್ರಾರಂಭಿಕ ಟಿಪ್ಪಣಿಯಲ್ಲಿ ಮೆನ್‌ಷನ್ ಆಗಿದೆ. ಇದಕ್ಕೆಲ್ಲಾ ಸಾಕಷ್ಟು ಮಾಹಿತಿ ಕೊಟ್ಟಿದ್ದರೆ ಚೆನ್ನಾಗಿತ್ತು. ಅದರಲ್ಲಿ ತುಂಬಾ ಪಾಯಿಂಟ್‌ಗಳು ಇವೆ. ವಿಶೇಷವಾಗಿ ಸೋಪ್ಸ್ ಇಂಡಸ್ಟ್ರಿ ಇರಬಹುದು ಅಥವಾ ಇನ್ನಿತರ ಸಿಕ್ ಇಂಡಸ್ಟ್ರಿ ಇರಬಹುದು, ಅದಕ್ಕೆ ಒಂದು ಪುನರ್ ವಸತಿ ಹೇಳಿಕೊಂಡು ಸಾಕಷ್ಟು ಅನುದಾನ ಕೊಡುವುದು ಕಂಡು ಬಂದಿದೆ. ಅದೇ ರೀತಿ ಗಣರಾಜ್ಯೋತ್ಸವದಿಂದ ಹಿಡಿದು ಅನೇಕ ಉತ್ಸವಗಳಿಗೆ ಅನೇಕ ಕೋಟಿ ರೂಪಾಯಿಗಳನ್ನು ಕೊಟ್ಟಿರುವುದು ಇದರಲ್ಲಿ ಗಮನಕ್ಕೆ ಬಂದಿದೆ. ಉತ್ಸವಕ್ಕೆ ಸಂಬಂಧಪಟ್ಟಂತೆ ವಿಶೇಷ ಅನುದಾನ ಕೊಡುವಂತಹದು. ಇಂತಹ ಪೂರೈಕೆ ಬೇಡಿಕೆ ಒದಗಿಸುವುದು ಇದ್ದರೆ ನಮ್ಮ ಮಾಹಿತಿಗೆ ಬರಬೇಕು. ಏಕೆಂದರೆ ಇದಕ್ಕಾಗಿ ವಿಶೇಷವಾಗಿ ವ್ಯಯ ಮಾಡುವಂತಹದು. ಇವೆಲ್ಲಾ ಬಹಳ ಮಹತ್ವವಾಗಿರುವಂತಹದು. ಪೂರಕ ಬೇಡಿಕೆಯಲ್ಲಿ 516 ಕೋಟಿ ರೂಪಾಯಿಗೆ ಸಂಬಂಧಪಟ್ಟಂತೆ ಈಗ ಪುಸ್ತಕ ನಮ್ಮ ಕೈ ಸೇರಿದೆ. ಆದ್ದರಿಂದ ಹೆಚ್ಚಿನ ಮಾಹಿತಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಆದರೆ ಕಂಡು ಬಂದ ಕೆಲವು ಅವಶ್ಯವಾದ ವಿಷಯಗಳನ್ನು ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಇದರಲ್ಲಿ ಒಂದು ಅಂದರೆ ಪೇಜ್ ಎರಡರಲ್ಲಿ ತೆಂಗು ಅಭಿವೃದ್ಧಿ ಮಂಡಲಿಗೆ ಸಂಬಂಧಪಟ್ಟಂತೆ, 73 ಲಕ್ಷ ರೂಪಾಯಿ ಕೊಟ್ಟಿರುವ ಆ ಪಾಯಿಂಟನ್ನು ಮೆನ್‌ಷನ್ ಮಾಡಿದ್ದಾರೆ. ಯಾವುದು ನಮ್ಮ ಬಜೆಟ್‌ನಲ್ಲಿ ಇಲ್ಲದ ಅಂದರೆ ಹೆಚ್ಚಿನ ಖರ್ಚು 73 ಲಕ್ಷವನ್ನು ಇದರಲ್ಲಿ ಮೆನ್‌ಷನ್ ಮಾಡಿದ್ದಾರೆ. ಅದೇ ರೀತಿ ಪೇಜ್ 4ರಲ್ಲಿ ಕೂಡ ಹಾಲಿನ ಉತ್ಪಾದನೆಗೆ ಸಂಬಂಧಪಟ್ಟು ಈಗಾಗಲೇ 120 ಲಕ್ಷ ರೂಪಾಯಿಯನ್ನು ಬೇಡಿಕೆಯಲ್ಲಿ ಸೇರಿಸಿದ್ದಾರೆ ಎಂದು ಹೇಳಿದ್ದಾರೆ. ಸಾಲದ ಮೊತ್ತ 80 ಲಕ್ಷ ಅನುದಾನ 120 ಲಕ್ಷ ಅಂದರೆ ಸುಮಾರು 200 ಲಕ್ಷ ರೂಪಾಯಿ ಕೆ.ಎಂ.ಎಫ್.ಗೆ ಸಾಲವಾಗಿ ಕೊಟ್ಟಿದ್ದನ್ನು ಆದರಲ್ಲಿ ಮೆನ್‌ಷನ್ ಮಾಡಿದ್ದಾರೆ. ಆದರೆ ಹಾಲಿನ ಬಗ್ಗೆ ಅಷ್ಟು ಮೆನ್‌ಷನ್ ಮಾಡುವಾಗ ಇವತ್ತು ಕರ್ನಾಟಕದಲ್ಲಿ ಹಾಲು ದೊರಕುವಂತಹದನ್ನು ಬಹುಶಃ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಹಾಲನ್ನು ಕೊಳ್ಳುತ್ತೇವೆ. ಮಂಗಳೂರಿನಲ್ಲಿ ಹಾಲು ಸರಿಯಾಗಿ ಪೂರೈಕೆ ಆಗುವಂತಹ ಹೊಣೆಗಾರಿಕೆ ನಮಗೆ ಇದ್ದರೂ ಕೂಡ ಅನುದಾನವನ್ನು ಕೊಡುವಾಗ ಸರಿಯಾಗಿ

ಪೂರೈಕೆ ಆಗುವಂತಹ ಹೊಣೆಗಾರಿಕೆ ನಮಗೆ ಇದೆ. ಇದರ ಬಗ್ಗೆ ಕೂಡ ನಾವು ಪೇಪರ್ ಮಿಲ್ಸ್ ಪುನರ್ ವಸತಿಗಾಗಿ ಕೆಲವು ಪರಿಹಾರ ಮತ್ತು ರಿಯಾಯಿತಿಯನ್ನು ನೀಡಿದ್ದಾರೆ. ಅದರ ಜೊತೆಯಲ್ಲಿ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಸಂಸ್ಥೆಯನ್ನು ಪುನರ್ ವಸತಿಗೊಳಿಸಲು. ಅಂದರೆ ಸುಮಾರು 82 ಕೋಟಿ, ಇದರಲ್ಲಿ ಸುಮಾರು 14 ಕೋಟಿಯನ್ನು ಇಟ್ಟಿದ್ದಾರೆ ಎಂದು ಹೇಳಿದರೆ, ಬಹುಶಃ ವಸತಿಗೋಸ್ಕರವಾಗಿ ನಾವು ಇಷ್ಟು ಹಣವನ್ನು ಕಾದಿರಿಸಿದ್ದೇವೆ ಎಂದು ಹೇಳಿ, ಇದಕ್ಕೋಸ್ಕರವೇ ಬಜೆಟ್ ಇಲ್ಲದೇ ಇದನ್ನು ಪೂರಕ ಬೇಡಿಕೆಗಳಲ್ಲಿ ತೋರಿಸದ್ದನ್ನು ನಾವು ಗಮನಿಸಬಹುದು. ಪೇಜ್ 30ರಲ್ಲಿ ಬೇಡಿಕೆ ಸಂಖ್ಯೆ-3. ಸರ್ಕಾರದ ಎಲ್ಲಾ ಇಲಾಖೆಗಳ ಸಾಧನೆಗಳ ಬಗ್ಗೆ ಜಾಹಿರಾತುಗಳನ್ನು ನೀಡುವ ಸಲುವಾಗಿ ಮತ್ತು ಗಣ ರಾಜ್ಯೋತ್ಸ ದಿನಾಚರಣೆ ಮತ್ತು ಕನ್ನಡ ರಾಜ್ಯೋತ್ಸವ ಮತ್ತು ಇತರ ವಿಶೇಷ ಜಾಹಿರಾತುಗಳಿಗಾಗಿ ಹೆಚ್ಚಿನ ಮೊತ್ತವಾದ ಎರಡು ಕೋಟಿ ಅಂದರೆ 200 ಲಕ್ಷವನ್ನು ಬೇಡಿಕೆಯಲ್ಲಿ ಸೇರಿಸಿದ್ದೀರಿ. ಬಹುಶಃ ಇವು ಸ್ವಲ್ಪ ತಾವು ಗಮನದಲ್ಲಿಡಬೇಕಾದ ಸಂಗತಿಗಳು. ಇಷ್ಟು ದೊಡ್ಡ ಮೊತ್ತದ ಪೂರಕ ಬೇಡಿಕೆ ಇರುವಾಗ ಕನಿಷ್ಠ ಮೂರು ದಿವಸ ಮುಂಚೆ ಕೊಟ್ಟರೆ ಅಧ್ಯಯನ ಮಾಡುವುದಕ್ಕೆ ಅವಕಾಶ ಕೊಡಬೇಕು. ಇವತ್ತು ಸಮಯ ಏನೇನೂ ಇಲ್ಲ. ಆದ್ದರಿಂದ ಇನ್ನು ಮುಂದಿನ ದಿವಸಗಳಲ್ಲಾದರೂ ಇದಕ್ಕೆ ಸಂಬಂಧಪಟ್ಟಂತೆ ಅದನ್ನು ಮುಂಚಿತವಾಗಿ ಕೊಡಬೇಕು ಎಂದು ವಿನಂತಿ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು :- ಮಾನ್ಯ ಲಕ್ಷ್ಮಣ್‌ರವರು, ಯಾವಾಗಲೂ ಮಾತನಾಡುತ್ತಿರುತ್ತಾರೆ.

ಶ್ರೀ ಎಸ್.ಸುರೇಶ್ ಕುಮಾರ್ :- ಮಾನ್ಯ ಅಧ್ಯಕ್ಷರೆ, ಈ ಪೂರಕ ಅಂದಾಜುಗಳಲ್ಲಿ ಪುಟ 35 ರಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಸರ್ಕಾರದ ವಿವಿಧ ಇಲಾಖೆಗಳಿಂದ ಬಾಕಿ ಇರುವ ತೆರಿಗೆಯನ್ನು ಪಾವತಿ ಮಾಡಿಸಲು ನಾಲ್ಕು ಕೋಟಿ ರೂಪಾಯಿ ಅನುದಾನವಾಗಿ ಬಿಡುಗಡೆ ಮಾಡಲಾಯಿತು ಎಂದು ಹೇಳುತ್ತಾರೆ. ಈ ಸಂದರ್ಭದಲ್ಲಿ ಹೇಳುತ್ತೇನೆ. ಬೆಂಗಳೂರು ವಾಟರ್ ಸಪ್ಲೈಯನ್ನು ಕೆ.ಇ.ಬಿ.ಯವರು ಇನ್ನೊಂದು ಇಂಡಸ್ಟ್ರಿ ಎಂದು ತಿಳಿದುಕೊಂಡು ಬಿಟ್ಟಿದ್ದಾರೆ. ಸುಮಾರು ತಿಂಗಳಿಗೆ ಐದೂವರೆ ಕೋಟಿ ರೂಪಾಯಿ ಎಲೆಕ್ಟ್ರಿಕಲ್ ಬಿಲ್ಲನ್ನು ವಾಟರ್ ಸಪ್ಲೈಯವರು ಕಟ್ಟುತ್ತಿದ್ದಾರೆ. ನಾವು ಕೇಳಿದ್ದೇವೆ; ಬೆಳಗಾಂನಲ್ಲಿ ಯಾವುದೋ ಒಂದು ಇಂಡಸ್ಟ್ರಿಗೆ ಸಬ್ಸಿಡೈಸ್ಡ್ ರೇಟ್‌ನಲ್ಲಿ ಪವರ್ ಸಪ್ಲೈ ಮಾಡುತ್ತಿದ್ದರು ಎಂದು ಕೇಳಿದ್ದೇವೆ. ಇಂಡಾಲ್ ಕಂಪನಿಗೆ. ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ತಮ್ಮ ಮುಖಾಂತರ, ವಾಟರ್ ಸಪ್ಲೈಗೆ ನೀವು ಸಬ್ಸಿಡೈಸ್ಡ್ ರೇಟ್‌ನಲ್ಲಿ ಕರೆಂಟ್ ಕೊಟ್ಟರೆ ಉಳಿಯುವ ಹಣವನ್ನು ಬೆಂಗಳೂರು ನಗರದಲ್ಲಿ ಡೆವಲಪ್‌ಮೆಂಟ್ ವರ್ಕ್ಸ್‌ಗೆ ಅದು ಪೈಪ್ ಹಾಕುವುದು, ಲಿಂಕ್ ಮಾಡುವುದು ಇರಬಹುದು, ಇದಕ್ಕೆ ಉಪಯೋಗ ಆಗುತ್ತದೆ. ಈ ರೀತಿ ಅನುದಾನ ಬಿಡುಗಡೆ ಮಾಡುವುದಕ್ಕಿಂತ ಪಾಲಿಸಿ ಡೆಸಿಷನ್ ತೆಗೆದುಕೊಳ್ಳಬೇಕು. Bangalore Water Supply is not a Commercial Unit, it is a service Organisation. ಅದಕ್ಕೋಸ್ಕರ ಸಬ್ಸಿಡೈಸ್ಡ್ ರೇಟ್‌ನಲ್ಲಿ ಪವರ್ ಸಪ್ಲೈ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಯು.ಬಿ.ಬಣಕಾರ್ :- ಮಾನ್ಯ ಅಧ್ಯಕ್ಷರೆ, ಪಶು ಸಂಗೋಪನಾ ಇಲಾಖೆಯಲ್ಲಿ

ಸರ್ಕಾರ ಜಾರಿಗೆ ತಂದಂತಹ ಮಕ್ಕಳಿಗೆ ಹಾಲು ಪೂರೈಕೆ ಯೋಜನೆಯಲ್ಲಿ ಧಾರವಾಡ ಹಾಲು ಮಹಾ ಮಂಡಳಿಗೆ ಸರ್ಕಾರ ಸಾಕಷ್ಟು ಹಣ ಬಿಡುಗಡೆ ಮಾಡಬೇಕಾಗಿದೆ. ಇದರಿಂದ ಧಾರವಾಡ ಹಾಲು ಮಹಾ ಮಂಡಳಿ ತನ್ನ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಹಣ ಬಿಡುಗಡೆ ಮಾಡಲಾಗಿಲ್ಲ. ಇದರಿಂದ ಕಳೆದ ಎರಡು ತಿಂಗಳಿಂದ ರೈತರಿಗೆ ತೊಂದರೆಯಾಗಿರುವುದರಿಂದ ಸರ್ಕಾರದಿಂದ ಬಾಕಿ ಇರುವ ಆ ಹಣವನ್ನು ಪೂರ್ತಿ ಈ ಪೂರಕ ಅಂದಾಜಿನಲ್ಲಿ ಸೇರಿಸಬೇಕು. ಅದಲ್ಲದೆ 1987ನೇ ಇಸವಿಯಿಂದ 1991ರವರೆಗೆ ಜನತಾ ಮನೆಯ ಯೋಜನೆಯಲ್ಲಿ ಧಾರವಾಡ ಜಿಲ್ಲೆಗೆ ಒಂದು ಕೋಟಿ 90 ಲಕ್ಷ ರೂಪಾಯಿಗಳನ್ನು ನಾವು ಕಳೆದ 5 ವರ್ಷಗಳಿಂದ ಜನ ಕೇಳುತ್ತಿದ್ದಾರೆ ಅದನ್ನೂ ಸಹ ಈ ಪೂರಕ ಅಂದಾಜಿನಲ್ಲಿ ಸೇರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ|| ಯು. ಚಿತ್ತರಂಜನ್ :- ಸನ್ಮಾನ್ಯ ಅಧ್ಯಕ್ಷರೆ, ಪುಟ 44ರಲ್ಲಿ ಭಟ್ಟಳದಲ್ಲಿ ನಡೆದ ದೊಂಬಿ ವಿಚಾರಣೆಗಾಗಿ ನೇಮಿಸಲಾಗಿದ್ದ ನ್ಯಾಯಮೂರ್ತಿ ಕೆ. ಜಗನ್ನಾಥ ಶೆಟ್ಟಿ ವಿಚಾರಣಾ ಆಯೋಗದ ಅವಧಿಯನ್ನು ವಿಚಾರಣೆ ಪೂರ್ಣಗೊಳಿಸಿ ವರದಿಯನ್ನು ಒಪ್ಪಿಸಲು 31.3.95ರವರೆಗೆ ಆರೂವರೆ ತಿಂಗಳು ಕಾಲ ವಿಸ್ತರಿಸಲಾಯಿತು. ಇದು ನಾಳೆಗೆ ಮುಗಿದು ಹೋಗುತ್ತದೆ. ಆದರೆ ಇನ್ನೂ ಕೂಡ ವಿಚಾರಣೆ ಕೇವಲ ಸರ್ಕಾರೀ ಅಧಿಕಾರಿಗಳು ಮತ್ತು ಖಾಸಗಿ ವಿಟ್‌ನೆಸ್‌ಗಳದ್ದು ಆಗಿದೆ. ಇನ್ನೂ ಸಾಕಷ್ಟು ಬಾಕಿ ಇದೆ. ಆದುದರಿಂದ ತಮ್ಮ ಮುಖಾಂತರ ನಾನು ಸಂಬಂಧಪಟ್ಟ ಮಂತ್ರಿಗಳನ್ನು, ಗೃಹ ಮಂತ್ರಿಗಳನ್ನು ವಿನಂತಿಸುವುದಕ್ಕೆ ಇಚ್ಛಿಪಡುತ್ತೇನೆ. ಆದಷ್ಟು ಬೇಗ ವಿಚಾರಣೆ ಆಗುವ ಹಾಗೆ ಕ್ರಮ ಕೈಗೊಂಡರೆ ಒಳ್ಳೆಯದು. ಏಕೆಂದರೆ ಜಸ್ಟೀಸ್ ಡಿಲೇಡ್ ಇಸ್ ಜಸ್ಟೀಸ್ ಡಿನೇಡ್ ಆಗುತ್ತದೆ. ಹಾಗಾಗಿ ಈ ಬಗ್ಗೆ ಸರ್ಕಾರ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ರಾಜ್ಯ ವಿಧಾನ ಮಂಡಲದ ಸದಸ್ಯರಿಗೆ ಮೋಟಾರ್ ವಾಹನ ಮುಂಗಡ ಪಾವತಿಗಾಗಿ ಬಾಕಿ ಇರುವ ಅರ್ಜಿಗಳ ವಿಲೇವಾರಿಗಾಗಿ 30 ಲಕ್ಷ ರೂಪಾಯಿಗಳ ಹೆಚ್ಚುವರಿ ಭತ್ಯೆ ಆಗತ್ಯ ಇದೆ. ಅದನ್ನು ಹೇಳಿದ್ದಾರೆ. ನಾನು ಈಗಾಗಲೇ ಅಯವ್ಯಯದಲ್ಲಿ ಮಾತನಾಡುವಾಗ ಈ ಸದಸ್ಯರುಗಳಿಗೆ ಏನೇನು ಕೊಡಬೇಕು ಎನ್ನತಕ್ಕಂತಹದ್ದನ್ನು ಪ್ರಸ್ತಾಪ ಮಾಡಿದೆ. ಮಾನ್ಯ ಅರ್ಥ ಸಚಿವರು ಆ ಬಗ್ಗೆ ಉತ್ತರ ಕೊಡಲಿಲ್ಲ. ನಾನು ಪ್ರಸ್ತಾಪ ಮಾಡಿದ್ದು ಶಾಸಕರುಗಳಿಗೆ ಕನಿಷ್ಠ ಒಬ್ಬ ಆಪ್ತ ಸಹಾಯಕ ಇರಬೇಕು. ಸಾಮಾನ್ಯವಾಗಿ ಅವನು ಹಳ್ಳಿಗಳಿಗೆ ಹೋದರೆ ಯಾವುದಾದರೂ ಊರಿಗೆ ಹೋದಾಗ ಜನ ಕೊಟ್ಟ ಅರ್ಜಿಗಳನ್ನು ಸ್ವೀಕರಿಸಿ ಬರೆದುಕೊಳ್ಳುವುದಕ್ಕೆ, ಎಷ್ಟು ಅರ್ಜಿಗಳು ಬಂದಿವೆ ಎಂದು ಬರೆದುಕೊಳ್ಳುವುದಕ್ಕೆ ಅವರಿಗೆ ಉತ್ತರ ಕೊಡುವುದಕ್ಕೆ ಒಬ್ಬ ಸಹಾಯಕ ಇರಬೇಕು. ಸಾಮಾನ್ಯವಾಗಿ ಇಲ್ಲಿ ಶಾಸಕರಾದವರೇ ತಕ್ಷಣ ಮಂತ್ರಿಗಳಾಗುತ್ತಾರೆ. ಈ ಮಂತ್ರಿಗಳಿಗೆ ಹೆಚ್ಚು ಕಡಿಮೆ 20 ಜನ ಸಿಬ್ಬಂದಿ ಇರುತ್ತಾರೆ. 20 ರಲ್ಲಿ ಎಷ್ಟು ತಮಗೆ ಸೇರಿದ ಹಾಗೆ ಸುಮಾರು ಹಿಂದೆ ಮುಂದೆ ಎಲ್ಲಾ ಕಡೆಯಿಂದ ಬರಹಗಾರರು, ಪಿ.ಎ.ಗಳು ಸೆಕ್ರೆಟರಿಗಳು, ಡ್ರೈವರ್ಸ್ ಮತ್ತು ಗನ್‌ಮ್ಯಾನ್‌ಗಳು ಸುಮಾರು 10-12 ಜನ ಇರುತ್ತಾರೆ. ನಾವು ಶಾಸಕರಿಗೆ ಒಬ್ಬ ಆಪ್ತ ಸಹಾಯಕನನ್ನು ಕೊಡತಕ್ಕಂತಹ ವ್ಯವಸ್ಥೆ ಇರಬೇಕು. ಇದು ಬೇರೆ ರಾಜ್ಯಗಳಲ್ಲಿ

ಮಹಾರಾಷ್ಟ್ರವಾಗಲಿ, ತಮಿಳುನಾಡಾಗಲಿ, ಆಂಧ್ರವಾಗಲಿ ಅಲ್ಲೆಲ್ಲ ಕಡೆ ಶಾಸಕರುಗಳಿಗೆ ಅನೇಕ ಅವರ ಕೆಲಸ ಕಾರ್ಯ ಮಾಡಬೇಕು, ಕ್ಷೇತ್ರದ ಕೆಲಸ ಕಾರ್ಯ ಮಾಡಬೇಕು, ಬಹಳ ಜನಕ್ಕೆ ಏನಾಗಿದೆ ಅಂದರೆ ಶಾಸಕರು ಅಂದರೆ ಅವರೆಲ್ಲ ಕೆಲಸಕ್ಕೆ ಬಾರದವರು ಮತ್ತು ಎಲ್ಲರ ಬಾಯಿಗೆ ಬಿದ್ದಿರತಕ್ಕಂಥವರು. ಮತ್ತು ಎಲ್ಲರ ಕೈಲಿ ಬೈಸಿಕೊಳ್ಳತಕ್ಕಂಥವರು. ಮೊನ್ನೆ ಒಂದು ಸಮಾರಂಭದಲ್ಲಿ ತಮ್ಮ ಒಂದು ಮಾತನ್ನು ಕೇಳಿ ನಾನು ಮೆಚ್ಚಿದೆ. ನಿಮ್ಮ ಧೈರ್ಯ ಮತ್ತು ಹೇಳತಕ್ಕಂತಹ ಧಾಟಿಯನ್ನು ನಾನು ಮೆಚ್ಚಿದೆ. ಮೈಸೂರಿನಲ್ಲಿ ಒಂದು ಸಮಾರಂಭದಲ್ಲಿ ಒಬ್ಬ ಸಾಹಿತಿಗಳು ರಾಜಕಾರಣಿಗಳೆಲ್ಲ ಸುಳ್ಳರು, ಕೆಲಸಕ್ಕೆ ಬಾರದವರು, ಕಳ್ಳರು ಎಂಬ ಅರ್ಥದಲ್ಲಿ ಮಾತನಾಡಿದಾಗ ನೀವು ಆ ತಕ್ಷಣವೇ ಆ ಸಂದರ್ಭದಲ್ಲಿ ಮಾತನಾಡಿದ್ದನ್ನು ನಾನು ಮೆಚ್ಚಿದೆ. ಒಬ್ಬ ಶಾಸಕ ಒಂದು ಚುನಾವಣೆಯಲ್ಲಿ ಗೆದ್ದ ಮೇಲೆ ಅವನ ಕ್ಷೇತ್ರದಲ್ಲಿ ಎಷ್ಟು ಕೆಲಸ ಆಗಬೇಕು, ಏನು ಮಾಡಬೇಕು ಎಂದು ಹಗಲು ರಾತ್ರಿ ಕಷ್ಟಪಡುವ ಆ ಪರಿಸ್ಥಿತಿ ಅವರಿಗೆ ಅರ್ಥವಾಗಿದೆ. ನಾನು ಬೆಂಗಳೂರಿನಲ್ಲಿ ವಾಸವಾಗಿದ್ದರೂ ನನ್ನ ಕ್ಷೇತ್ರ ಚಾಮರಾಜನಗರ. ಅದು ಸುಮಾರು 200 ಕಿ.ಮಿ. ಆಗುತ್ತದೆ. ಉದಾಹರಣೆಗೆ ಪ್ರತಿ ಶನಿವಾರ ನಾನು ಬೆಳಿಗ್ಗೆಯಿಂದ ಸಾಯಂಕಾಲ ಹೋಗುವುದು ಮತ್ತು ಸೋಮವಾರ ಬೆಂಗಳೂರಿಗೆ ಬರತಕ್ಕಂಥಾದ್ದು ಈ ರೀತಿ ಮಾಡುತ್ತಿದ್ದೇನೆ. ಅಂದರೆ ಜನರ ಪರಿಸ್ಥಿತಿಯನ್ನು ಹಳ್ಳಿಗಳ ಪರಿಸ್ಥಿತಿಯನ್ನು ನೋಡತಕ್ಕಂತಹ ವ್ಯವಸ್ಥೆ ಆದು. ಆದರೆ ಹಿಂದಿನ ಸರ್ಕಾರಗಳು ಶಾಸಕರನ್ನು ಗೌರವದಿಂದ ಕಾಣುತ್ತಿದ್ದರು. ಈ ಸರ್ಕಾರಕ್ಕೆ ಶಾಸಕರು ಅಂದರೆ ಆಗುವುದಿಲ್ಲ. ಅದರಲ್ಲೂ ಮುಖ್ಯ ಮಂತ್ರಿಗಳಿಗೆ ಶಾಸಕರು ಅಂದರೆ ಇದ್ದಕ್ಕಿದ್ದಂತೆ ಮುಖ ಗಂಟು ಆಗುತ್ತದೆ ಮತ್ತು ಕೆಂಪಾಗುತ್ತದೆ. ಶಾಸಕರು ಅಂದರೆ ಅದೆಲ್ಲಾ ಆಗುವುದಿಲ್ಲ ಬಿಡಿ. ಶಾಸಕರು ಅಂದರೆ ಆಗುವುದಿಲ್ಲ. ನಾವು ಶಾಸಕರಿದ್ದರೆ ಅವರು ಮುಖ್ಯ ಮಂತ್ರಿ ಅಲ್ಲವೆ, ಅವರು ತಿಳಿದುಕೊಳ್ಳಬೇಕು. ಅವರು ಸುಮಾರು 40-50 ವರ್ಷಗಳ ಕಾಲ ರಾಜಕಾರಣದಲ್ಲಿ ಇದ್ದು ಈ ಶಾಸನ ಸಭೆಯ ಸದಸ್ಯರು ಮತ್ತು ವಿರೋಧ ಪಕ್ಷದ ನಾಯಕರಾಗಿ, ಲೋಕ ಸಭೆಯ ಸದಸ್ಯರಾಗಿ, ಮಂತ್ರಿಗಳಾಗಿ ಕೆಲಸ ಮಾಡಿರತಕ್ಕಂತಹವರು. ಅವರ ಬಗ್ಗೆ ನನಗೆ ಬಹಳ ಗೌರವ ಇದೆ. ಆದರೆ ಶಾಸಕರು ಅಂದ ತಕ್ಷಣ ನಾನು ಅವರಿಗೆ ಏಕೆ ಕೊಡಬೇಕು. ಅವರಿಗೆ ಯಾವ ಸವಲತ್ತುಗಳನ್ನು ಕೊಡಬೇಕು. ಸವಲತ್ತುಗಳು ಅಂದರೆ ಏನು ನಮಗೆ ಜಾಗೀರಿ ಕೊಡಬೇಕೆಂದು ಕೇಳುತ್ತಿದ್ದೇವೆಯೋ? ನಾವು ಬೇರೆ ಏನಾದರೂ ಕೇಳುತ್ತಿದ್ದೇವೆಯೋ? ನಾವು ಕೇಳತಕ್ಕಂಥಾದ್ದು ಏನೆಂದರೆ ಶಾಸಕರು ಎಲ್ಲಾದರೂ ಒಂದು ಹಳ್ಳಿಗೆ ಹೋದಾಗ ಒಂದು ನೂರು ಅರ್ಜಿಗಳನ್ನು ಕೊಡುತ್ತಾರೆ.

ಶ್ರೀ ವೈಜನಾಥ್ ಪಾಟೀಲ್ :- ಮಾನ್ಯ ಮುಖ್ಯ ಮಂತ್ರಿಗಳು ಸವಲತ್ತುಗಳ ಬಗ್ಗೆ ಏನೂ ಹೇಳಲಿಲ್ಲ. ಕೆಲವು ಡಾಕ್ಯುಮೆಂಟ್ಸ್ ಕೇಳಿದಾಗ ಮಾತ್ರ ಅದರ ಬಗ್ಗೆ ಹೇಳಿದರು. ಸವಲತ್ತುಗಳ ಬಗ್ಗೆ ಏನೂ ಹೇಳಲಿಲ್ಲ. ಮುಖ್ಯ ಮಂತ್ರಿಗಳು ಸವಲತ್ತುಗಳ ಕೊಡಬಾರದು ಎಂದು ಏನೂ ಹೇಳಲಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ :- ಮಾನ್ಯ ಅಧ್ಯಕ್ಷರೆ, ಹೋದ ಸಾರಿ ಸಂಬಳ ಸಾರಿಗೆ ಈ ವಿಚಾರದಲ್ಲಿ ಶಾಸಕರ ವಿಚಾರದಲ್ಲಿ ಹೇಳಿದಾಗ ಒಂದು ಸಾವಿರ ರೂಪಾಯಿಗಳನ್ನು

ಇಂತಹ ಸೆಕ್ರೇಟೇರಿಯಲ್ ಸರ್ವೀಸ್‌ಗಾಗಿ ಕೊಟ್ಟಿರತಕ್ಕಂಥಾದ್ದು ಇದೆ. ಆಗ ನಾನು ಸದನದಲ್ಲಿ ಸದಸ್ಯನಾಗಿರಲಿಲ್ಲ. ಆದರೆ ಸಾವಿರ ರೂಪಾಯಿ ಮಾತ್ರ ಕೊಟ್ಟಂತಹ ವಿಷಯ ನನಗೆ ಜ್ಞಾಪಕ ಇದೆ.

ಶ್ರೀ ವಾಟಾಳ್ ನಾಗರಾಜ್ :- ನಮಗೆ ಒಬ್ಬರಿಗೆ ಅಲ್ಲ, ಮಂತ್ರಿಗಳಿಗೂ ಕೊಟ್ಟಿದ್ದಾರೆ. ಶಾಸಕರಿಗೆ ಒಂದು ಪಟ್ಟು ಕೊಟ್ಟು ನೀವು ನಾಲ್ಕು ಪಟ್ಟು ತೆಗೆದುಕೊಂಡು ಬಿಟ್ಟಿರಿ. ಲೆಕ್ಕ ನೋಡಿ. ಶಾಸಕರ ಹೆಸರಿನಲ್ಲಿ ತಾವು ಎಷ್ಟೆಷ್ಟು ತೆಗೆದುಕೊಂಡಿದ್ದೀರಿ ಎನ್ನುವುದು ನನಗೆ ಗೊತ್ತಿದೆ. ನೀವು ಮಾತನಾಡುವುದು ಬೇಡ. ನೀವು ಒಂದೊಂದು ಮೈಲಿಗೆ ಎಷ್ಟು ಭತ್ಯೆ ತೆಗೆದುಕೊಂಡಿದ್ದೀರಿ ಹೇಳಿ.

ಶ್ರೀ ಸಿ.ಬೈರೇಗೌಡ :- ಮಾನ್ಯ ಅಧ್ಯಕ್ಷರೆ, ನಾನು ಸಮಿತಿಯಲ್ಲಿ ಕೆಲಸ ಮಾಡಿದ್ದೇನೆ. ಈಗ ಅವರು ಬಹುಶಃ ಏನು ಮಾಡುತ್ತಾರೆ ಎಂದರೆ ಸಾಮಾನ್ಯವಾಗಿ ಬಿಲ್ಲಿಗೆ ಒಂದು ರುಜು ಮಾಡುತ್ತಾರೆ. ನಾವೆಲ್ಲರೂ ಅದೇ ತರಹ ಮಾಡತಕ್ಕಂಥಾದ್ದು. ಆ ಬಿಲ್‌ನಲ್ಲಿ ಯಾವುದಕ್ಕೆ ಎಷ್ಟೆಷ್ಟು ಎಂದು ಬಿಲ್ಲಿನ ವಿವರ ನೋಡಿದರೆ ಈ ಮಾನ್ಯ ವಾಟಾಳ್ ನಾಗರಾಜ್ ರವರು ಏನೇನು ಮಾತನಾಡಿದ್ದಾರೆ ಅದೆಲ್ಲಕ್ಕೂ ಕೂಡ ಹಣ ಕೊಡುತ್ತಿದ್ದೇವೆ. ಜೊತೆಗೆ ಇವತ್ತು ಲೆಜಿಸ್ಲೇಟರ್ಸ್ ಹೋಮ್‌ನಲ್ಲಿ ಇರತಕ್ಕಂತಹ ರೂಮ್ ಬಾಯ್ಸ್ ಎನ್ನತಕ್ಕಂತಹವರನ್ನು ತೆಗೆದು ಅದಕ್ಕೆ ಬದಲಾಗಿ 500 ರೂಪಾಯಿ ವಿಶೇಷ ಭತ್ಯೆ ಸಹ ಕೊಡುತ್ತಿದ್ದಾರೆ. ಇದಲ್ಲದೆ ತಾವು ಏನು ಹೇಳುತ್ತಿದ್ದೀರೋ, ಅದು ಏನಾಗುತ್ತಿದೆ ಅಂದರೆ ಆಫೀಸಿನಲ್ಲಿ ಬರೀ ಬಿಲ್‌ಗೆ ನಾವು ರುಜು ಮಾಡುತ್ತಾ ಇರುತ್ತೇವೆ. ಅಲ್ಲಿ ವಿವರಗಳು ಇರತಕ್ಕಂಥಾದ್ದು ಇದೆ. ಆದರಿಂದ ಇವೆಲ್ಲವೂ ಕೂಡ ಮಾಡಲು ಅದಕ್ಕೆ ಸಾಕಷ್ಟು ಹಣ ಪಾವತಿ ಆಗುತ್ತಿದೆ. ದಯವಿಟ್ಟು ನಾನು ಆ ಸಮಿತಿಯಲ್ಲಿ ಇದ್ದುದರಿಂದ ಹೇಳುತ್ತಿದ್ದೇನೆ ಸಮಯ ಆಗುತ್ತಿದೆ, ಮಾನ್ಯ ಅಧ್ಯಕ್ಷರೆ,.....

ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿ:- ಹೋದ ಸರ್ಕಾರ ಇದ್ದಾಗ ಒಂದು ಸಾವಿರ ರೂಪಾಯಿ ಏನೋ ಕೊಟ್ಟು ಆ ರೂಮ್ ಬಾಯ್ಸ್ ತೆಗೆದು ಬಿಟ್ಟಿದ್ದಾರೆ. ನಾವು ಬೆಳಿಗ್ಗೆ ಎದ್ದು ನಾವೇ ಕಸ ಹೊಡೆದು ಮತ್ತೆ ಸಾಯಂಕಾಲ ಕಸ ಹೊಡೆಯುವುದು ನಮ್ಮ ಕೆಲಸವಾಗಿದೆ. ಅದಕ್ಕೆದಯಮಾಡಿ ಏನಾದರೂ ಮಾಡಿ ಸರಿಪಡಿಸಿ.

ಅಧ್ಯಕ್ಷರು :- ರೂಮ್ ಬಾಯ್ಸ್ ಇದ್ದರೆ ಅವನನ್ನು ಮಿಲಿಟರಿ ಹೋಟೆಲ್‌ಗೆ ಕಳುಹಿಸಿ ಬಿಡುತ್ತಾರೆ. ಇಲ್ಲದೆ ಇದ್ದರೆ ಹೀಗೆ ಹೇಳುತ್ತೀರಿ.

ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿ:- ಅದಕ್ಕೆ ಎಲ್ಲಾ ತೊಂದರೆಯಾಗಿದೆ ಏನಾದರೂ ಮಾಡಿ ಸರಿಪಡಿಸಿ.

ಶ್ರೀ ಸಿ.ಎಂ.ಉದಾಸಿ:- ಸನ್ಮಾನ್ಯ ಅಧ್ಯಕ್ಷರೆ, ಇವತ್ತು ನಮಗೆ ಒಂದು ಸ್ಯಾಲರಿ ಎರಡು ಸಾವಿರ, ಟೆಲಿಫೋನ್ ಎಕ್ಸ್‌ಪೆಂಡಿಚರ್ 5,000 ರೂಪಾಯಿ.....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ಈಗ ನನ್ನದು ಇವರು ಏನು ತಿಳಿದುಕೊಂಡಿದ್ದಾರೆ ಅಂದರೆ ನಮ್ಮ ಜನತಾ ದಳ ಸಚಿವರು ಇವರು ಏನು ಆಕಾಶದಿಂದ ಆಗತಾನೆ ಇಳಿದವರು. ಮತ್ತು ಇವರು ಏನು ಎಲ್ಲಾ ಸರ್ವ ತ್ಯಾಗ ಮಾಡಿದವರು ಮತ್ತು ಪಾಪ, ಇಂತಹ ಸತ್ಯ ಹರಿಶ್ಚಂದ್ರನಂತೆ ಜಗತ್ತಿನಲ್ಲಿ ಯಾರೂ ಇಲ್ಲ ಎನ್ನುವ ರೀತಿಯಲ್ಲಿ ನಮ್ಮ ಪ್ರಕಾಶ್ ರವರು ಮಾತನಾಡುತ್ತಿದ್ದಾರೆ. ನಾನು ಒಪ್ಪುತ್ತೇನೆ, ನಾನು ಇಲ್ಲ ಎಂದು ಹೇಳಲಿಲ್ಲ. ಸಂಬಳ ಸಾರಿಗೆ ವ್ಯವಸ್ಥೆ ಇಲ್ಲ ಎಂದು ನಾನು ಹೇಳಲಿಲ್ಲ. ಅದು ಹೇಳಿದರೆ ನೀವು ಲೆಕ್ಕ ತೆಗೆದುಕೊಂಡಬಹುದು. ಈಗ ಅದು ಬಂದರೂ ತೆಗೆದುಕೊಳ್ಳುವುದಿಲ್ಲ. ನಿಮಗೆ ಯಾರಿಗೆ ಆಪ್ತ ಸಹಾಯಕರು ಎಷ್ಟು ಜನ ತೆಗೆದುಕೊಂಡಿದ್ದೀರಿ, ಎಷ್ಟು ಜನ ಬೇಕು ಹೇಳಿ, ತಮ್ಮನ್ನು ಕೇಳುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ನಾನು ಏನೋ ಆಕಸ್ಮಿಕವಾಗಿ ಕೈ ಎತ್ತಿದೆ, ದಯಮಾಡಿ ತಾವು ನಿಮ್ಮ ಹತ್ತಿರಕ್ಕೆ ನಾನು ಬಂದೆ ಎಂದು ತಾವು ತಪ್ಪು ತಿಳಿದುಕೊಳ್ಳಬಾರದು. ಶಾಸನ ಸಭೆಯ ಮನಸ್ಸು ಹೇಗಿದೆ ಎಂದು ತಮಗೆ ಅರ್ಥವಾಯಿತು.

ಅಧ್ಯಕ್ಷರು :- ನಿಮಗೆ ಎತ್ತಿ ಕೈಗಳ ಕಡಿಮೆ ಆಯಿತು ಎಂದು ನೀವು ಎರಡೂ ಕೈಗಳನ್ನು ಎತ್ತು ಬಿಟ್ಟರಲ್ಲ.

ಶ್ರೀ ವಾಟಾಳ್ ನಾಗರಾಜ್ :- ನಾನು ಇಡೀ ಸದನಕ್ಕೆ ಬಹಳ ಎಲ್ಲರಿಗೂ ಬೆಂಬಲ ಕೊಡೋಣ ಎಂದು ಕೈ ಎತ್ತಿದೆ. ಇಡೀ ಸದನಕ್ಕೆ ಶಾಸಕರ ಸಂಪೂರ್ಣ ಪರಿಸ್ಥಿತಿಗಳನ್ನು ತಿಳಿಸಬೇಕೆಂದು ಕೈ ಎತ್ತಿದೆ. ನಾನು ಬೆಳಿಗ್ಗೆ ಅಧ್ಯಕ್ಷರ ಬಗ್ಗೆ ಮಾತನಾಡಿದೆ. ಎಂದರೆ ನಿಮ್ಮನ್ನು ಕುಳ್ಳಿರಿಸಿಕೊಂಡು ಮಾತನಾಡತಕ್ಕಂಥ ಪ್ರಶ್ನೆ ಅಲ್ಲ ನಾನು ಮಾತನಾಡುವುದು. ಆ ಪೀಠದ ಬಗ್ಗೆ, ಅಧ್ಯಕ್ಷರ ಬಗ್ಗೆ ನನಗೆ ಮೊದಲಿನಿಂದಲೂ ಗೌರವ ಇದೆ, ನಾನು ಶ್ರೀಮಾನ್ ವೈಕುಂಠ ಬಾಳಿಗ ಅವರ ಕಾಲದಿಂದಲೂ ಈ ಸದನದಲ್ಲಿ ಇದ್ದೇನೆ. ಅವತ್ತಿನಿಂದಲೂ ಆ ಪೀಠಕ್ಕೆ ಪ್ರಾಮಾಣಿಕವಾಗಿ ಗೌರವ ಕೊಟ್ಟರತಕ್ಕಂಥ ವ್ಯಕ್ತಿಗಳು. ಆ ಬಗ್ಗೆಯೂ ಸಹ ನಾನು ಮಾನ್ಯ ಅರ್ಥ ಸಚಿವರ ಗಮನಕ್ಕೆ ಬೆಳಿಗ್ಗೆ ತಂದೆ. ಶಾಸಕರ ಬಗ್ಗೆ ಪರಿಶೀಲನೆ ಎಂದಿದ್ದರೆ ಒಂದು ತರಹ ಆಗುತ್ತಿತ್ತು. ನಾನು ಬೆಳಿಗ್ಗೆ ಏನು ಹೇಳಿದೆ ಎಂದರೆ, ಸಭಾಧ್ಯಕ್ಷರು ನಮಗಿಂತಲೂ ಬಹಳ ಎತ್ತರದಲ್ಲಿದ್ದಂತಹ ಪೀಠದಲ್ಲಿ ಇರತಕ್ಕಂಥವರು. ನಾನು ತಮಗೆ ಏನು ಹೇಳಿದೆ ಎಂದರೆ ಅವರು ಯಾವುದೇ ಜಿಲ್ಲೆಗೆ ಹೋಗಲಿ, ತಾಲ್ಲೂಕಿಗೆ ಹೋಗಲಿ, ಒಂದು ಬೆಂಗಾವಲು ಇರಬೇಕಾದ್ದು ಒಳ್ಳೆಯದು. ನಾನು ಹಿಂದಿನ ಅಧ್ಯಕ್ಷರು ಇದ್ದಾಗಲೂ ಹೇಳಿದ್ದೆ, ಮಾನ್ಯ ಕೌಜಲಗಿಯವರು ಇದ್ದಾಗಲೂ ಇದನ್ನೆ ಪ್ರತಿಪಾದನೆ ಮಾಡಿದ್ದೆ. ಸರ್ಕಾರ ನಮ್ಮ ಸದನದ ಅಧ್ಯಕ್ಷರನ್ನು ಗೌರವಯುತವಾಗಿ ನೋಡಿಕೊಳ್ಳಬೇಕು. ಅವರು ಜಿಲ್ಲೆ ಅಥವಾ ತಾಲ್ಲೂಕಿಗೆ ಹೋದರೆ ಅಧಿಕಾರಿಗಳು ಬಂದು ಸೌಜನ್ಯಕ್ಕಾದರೂ ಶಿಷ್ಟಾಚಾರಕ್ಕಾದರೂ ಭೇಟಿ ಮಾಡತಕ್ಕಂಥ ಒಂದು ಆದೇಶವನ್ನು ಸರ್ಕಾರ ಹೊರಡಿಸಬೇಕು. ಮತ್ತೆ ಅವರ ಹಿಂದೆ ಕನಿಷ್ಠ ಸೌಜನ್ಯಕ್ಕಾದರೂ ಬೆಂಗಾವಲು

ಕೊಡಬೇಕಾದದ್ದು ನಮ್ಮ ಕರ್ತವ್ಯ. ಅದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ದಯವಿಟ್ಟು ತಾವು ಸರ್ಕಾರದ ಜೊತೆ ಮಾತನಾಡಿ ಕೂಡಲೇ ತರತಕ್ಕಂಥಾದ್ದು. ಮತ್ತು ಶಾಸಕರು ಒಬ್ಬ ಆಪ್ತ ಸಹಾಯಕರನ್ನು ಕೇಳಿದರು ಎಂದು ಹೇಳಿ ಮಾನ್ಯ ಉದಾಸಿಯವರು ಇಲ್ಲಿ ಲೆಕ್ಕ ಹಾಕಿಕೊಂಡು ಹೇಳಿದರು. ಇಲ್ಲಿ ನಾವು ಯಾರೂ ಶೆಟ್ಟರ ಲೆಕ್ಕಾಚಾರ ಹಾಕಲು ಬಂದಿಲ್ಲ. ಎಲ್ಲರೂ ಸೇರಿ ಪ್ರಾಮಾಣಿಕವಾಗಿ ಮಾತನಾಡೋಣ. ಒಬ್ಬ ಶಾಸಕನಿಗೆ ಎಷ್ಟೊಂದು ಕೆಲಸವಿರುತ್ತದೆ. ಆದರೆ ಅವರಿಗೆ ಏನೂ ಕೆಲಸವೇ ಇಲ್ಲ ಎನ್ನುವ ರೀತಿಯಲ್ಲಿ ನಾವು ಮಾತನಾಡತಕ್ಕಂಥಾದ್ದು ಬೇಡ. ಮಾನ್ಯ ಅಧ್ಯಕ್ಷರೆ, ತಾವು ಅನೇಕ ಸುಧಾರಣಾ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ, ಅದನ್ನು ನಾನು ಪ್ರಾಮಾಣಿಕವಾಗಿ ಮೆಚ್ಚುತ್ತೇನೆ. ಅನೇಕ ಶಾಸಕರಿಗೆ ತಾವು ತೋರಿಸತಕ್ಕಂಥ ಸೌಜನ್ಯ ಹಾಗೂ ತಮ್ಮ ಕಾರ್ಯಾಲಯಕ್ಕೆ ಎಷ್ಟು ಜನ ಶಾಸಕರು ಯಾವುದೇ ಭೇದಭಾವ ಇಲ್ಲದೆ ಬರುತ್ತಾರೆಂದು ನನಗೆ ಗೊತ್ತಿದೆ. ನನಗೆ ಅನಿಸುತ್ತದೆ, ಅಧ್ಯಕ್ಷರಾದವರಿಗೆ, ಯಾವುದೇ ಪಕ್ಷದವರು ಚುನಾವಣೆಗೆ ನಿಲ್ಲಿಸಬಾರದು. ಆ ಪದ್ಧತಿಯನ್ನು ನಾವು ಮಾಡಬೇಕು. ಅಧ್ಯಕ್ಷರು ಪಕ್ಷರಹಿತವಾಗಿ ಇರತಕ್ಕಂಥವರು. ಅವರು ಮುಂದೆ ಚುನಾವಣೆಗೆ ನಿಂತರೆ ಬೇರೆ ಯಾವ ಪಕ್ಷದವರೂ ಅವರ ಮೇಲೆ ನಿಲ್ಲಬಾರದು. ಅಧ್ಯಕ್ಷರನ್ನು ಅವಿರೋಧವಾಗಿ ಚುನಾಯಿಸತಕ್ಕಂಥ ಪದ್ಧತಿಯನ್ನು ನಮ್ಮ ಎಲ್ಲಾ ಪಕ್ಷದವರು ಕೈಗೊಳ್ಳಬೇಕು ಎನ್ನುವಂತಹ ಮಾತನ್ನು ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ. ಅದು ಇವರಿಂದಲೇ ಶುರುವಾಗಲಿ. ಹಾಗೆಂದ ಮಾತ್ರಕ್ಕೆ ನನಗೆ ವಾಟಾಳ್ ನಾಗರಾಜ್ ಇಲ್ಲೆ ಉಳಿಸಬೇಕು ಎಂದು ಹೇಳುತ್ತಿದ್ದಾರೆಂದು ತಾವು ತಪ್ಪು ತಿಳಿದುಕೊಳ್ಳಬಾರದು. ಏಕೆಂದರೆ ಬಂಧನದಲ್ಲಿ ಇರುತ್ತಿದ್ದಾರೆ ಎನ್ನುವ ಭಾವನೆ ಬೇಡ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ :- ಅವರು ಖಾಯಂ ಆಗಿ ಅಧ್ಯಕ್ಷರಾಗಿ ಉಳಿಯಬೇಕೇ?

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೆ, ತಾವು ಕಳೆದ 34 ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳನ್ನು ಸಭೆಯನ್ನು ಕರೆಯಬೇಕು. ಈ ಸಲಹಾ ಸಮಿತಿ ಸಭೆ ನಡೆದಾಗ ಮಾನ್ಯ ಮುಖ್ಯ ಮಂತ್ರಿಗಳಿಗೆ, ಶಾಸಕರುಗಳಿಗೆ ಆಗಬೇಕಾದಂತಹ ಎಂದರೆ ಅವರವರ ತಾಲ್ಲೂಕಿನಲ್ಲಿ ಏನು ಮೊದಲು ವ್ಯವಸ್ಥೆ ಇತ್ತು ಆ ವ್ಯವಸ್ಥೆಯನ್ನೆಲ್ಲಾ ಮತ್ತೆ ಕೊಡಬೇಕು ಎನ್ನುವುದು ಸ್ಪಷ್ಟ. ಇದು ಪಕ್ಷರಹಿತವಾದಂತಹ ವಾದ. ನಾನು ಏನು ಇದು ಜನತಾ ದಳ ಅಥವಾ ಕಾಂಗ್ರೆಸ್ ಅಥವಾ ಬಿ.ಜೆ.ಪಿ. ಎಂದು ಮಾತನಾಡುತ್ತಿಲ್ಲ. ನಾನು ಪಕ್ಷರಹಿತವಾಗಿ, ಪ್ರಾಮಾಣಿಕವಾಗಿ ಮಾತನಾಡುತ್ತಿದ್ದೇನೆ. ಹಿಂದೆ ಏನು ಇತ್ತು ಯಾವ್ಯಾವ ಸಮಿತಿಗೆ ಅಧ್ಯಕ್ಷರಾಗಿದ್ದರು ಅದು ಸ್ಪಷ್ಟವಾಗಲೇಬೇಕು. ಮತ್ತು ತಹಸೀಲ್ದಾರ್ ಆಫೀಸಿನ ವಿಷಯವಾಗಿ ಈ ಸದನದಲ್ಲಿ ಮುಖ್ಯ ಮಂತ್ರಿಗಳು ಏನು ಭರವಸೆ ಕೊಟ್ಟರು, 20 ಅಂಶಗಳ ಕಾರ್ಯಕ್ರಮದಲ್ಲಿ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿ; ಅದನ್ನು ಮುಖ್ಯ ಮಂತ್ರಿಗಳು ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ. ದಯಮಾಡಿ ತಮಗೆ ಹೇಳುತ್ತಿದ್ದೇನೆ, ಈ ಸಭೆ ತಾವು ಕರೆದೇ ಇಲ್ಲ, ಸೋಮವಾರ ಕರೆಯುತ್ತೇವೆ ಎಂದು ಹೇಳಿದ್ದೀರಿ. ಅದು ತಮ್ಮ ಮೇಲೆ ಇರತಕ್ಕಂಥ ಜವಾಬ್ದಾರಿ. ತಾವು ದಯವಿಟ್ಟು ಸಭೆ ಕರೆದು ಇದನ್ನೆಲ್ಲಾ ಸರಿಪಡಿಸಬೇಕಾದ್ದು ತಮ್ಮ ಕರ್ತವ್ಯ. ಪ್ರಾಮಾಣಿಕವಾಗಿ ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತೇನೆ. ತಾವು ಮಾಡಬೇಕು, ಆದರೆ ಅದು ಆಗಲಿಲ್ಲ ಎಂದರೆ ನಾವು ವಿಧಿ

ಇಲ್ಲದೆ ಬೇರೆ ಮಾರ್ಗ ಹಿಡಿಯಬೇಕಾದೀತು. ಆದಕ್ಕೆ ತಾವು ಅವಕಾಶವನ್ನು ಕೊಡಲಾರಿರಿ ಎನ್ನುವ ಭರವಸೆ, ನಂಬಿಕೆ ನಮಗೆ ಇದೆ. ಅದಕ್ಕಾಗಿ ದಯಮಾಡಿ ನನಗೆ ಈ ಒಂದು ಪೂರಕ ಅಂದಾಜುಗಳ ಬಗ್ಗೆ ನನಗೇನೂ ಅಷ್ಟೊಂದು ಒಲವು ಇಲ್ಲ. ಆದರೂ ಇದನ್ನು ತಾವು ಮತಕ್ಕೆ ಹಾಕಿದಾಗ ನಾನು ವಿರೋಧ ಮಾಡುತ್ತೇನೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಬಿ.ಶಿವಪ್ಪ :- ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್ ರವರು ಶಾಸಕರ ಬಗ್ಗೆ ಮಾತನಾಡುತ್ತಿದ್ದ ವಿಚಾರಗಳನ್ನು ಕೇಳಿದ್ದೇನೆ. ತಾವು ಭಾರತೀಯ ಜನತಾ ಪಕ್ಷವನ್ನು ಅಧಿಕೃತ ಪಕ್ಷವೆಂದು ಮಾನ್ಯ ಮಾಡಿ ಇಲ್ಲಿ ಗುರುತಿಸಿದ್ದೀರಿ. ನಮ್ಮದೇ ಅದಂತಹ ಒಂದು ಕಛೇರಿಯನ್ನು ವಿಧಾನ ಸೌಧದಲ್ಲಿ ಕೊಟ್ಟಿದ್ದೀರಿ. ಆದಕ್ಕೆ ಒಂದು ಸಿಬ್ಬಂದಿಯನ್ನು ಒದಗಿಸಲಿಲ್ಲ. ಭಾರಿ ಹೋರಾಟ ಮಾಡಿ ಎರಡು ಬೆರಳಚ್ಚು ಯಂತ್ರಗಳನ್ನು ಸರ್ಕಾರದಿಂದ ಪಡೆದುಕೊಂಡಿದ್ದೇವೆ. ಅಲ್ಲಿ ಎರಡು ಬೆರಳಚ್ಚುಗಾರರು ಮತ್ತು ಅಲ್ಲಿಗೆ ಬೇಕಾದಂತಹ ಒಂದೆರಡು ಸಿಬ್ಬಂದಿಗಳನ್ನಾದರೂ ತಾವು ಈ ಸಂದರ್ಭದಲ್ಲಿ ಒದಗಿಸಿಕೊಡಬೇಕು ಎಂದು ತಮ್ಮ ಮೂಲಕ ನಾನು ಸರ್ಕಾರವನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ವಿರೋಧ ಪಕ್ಷದ ನಾಯಕರ ಕಛೇರಿಗೆ ಅಲ್ಲ ನಾನು ಕೇಳುತ್ತಿರುವುದು, ಶಾಸಕಾಂಗ ಪಕ್ಷದ ಕಛೇರಿ ಎಂದು ತಾವು ಏನು ಕೊಟ್ಟಿದ್ದೀರಿ ಅದಕ್ಕೆ ಹೇಳುತ್ತಿರುವುದು.

ಶ್ರೀ ಕೆ.ಎಸ್.ಪುಟಣ್ಣಯ್ಯ:- ಮಾನ್ಯ ಅಧ್ಯಕ್ಷರೆ, ಪೇಜ್ ನಂ. 16ರಲ್ಲಿ 1994-95ನೇ ಸಾಲಿಗೆ ಶಾಲೆಗಳಲ್ಲಿ ಕೇಂದ್ರ ಪುರಸ್ಕೃತ ಗಣಕ ಸಾಕ್ಷರತಾ ಮತ್ತು ಅಧ್ಯಯನ ಯೋಜನೆಯನ್ನು ಕಾರ್ಯಗತಗೊಳಿಸಲು ಕೇಂದ್ರ ಸರ್ಕಾರವು 104.00 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಇದಕ್ಕಾಗಿ ಆಯವ್ಯಯದಲ್ಲಿ ಹಣವನ್ನು ಒದಗಿಸಿಲ್ಲವಾದ್ದರಿಂದ ಅವಶ್ಯಕವಿರುವ ಮೊತ್ತವನ್ನು ಬೇಡಿಕೆಯಲ್ಲಿ ಸೇರಿಸಲಾಗಿದೆ . ಇದು ಹೇಗೆ ಆಗಿದೆ ಎಂದರೆ, ಈ ಸಾಕ್ಷರತಾ ಆಂದೋಲನ ಕಾರ್ಯಕ್ರಮಗಳಲ್ಲಿ ಕೊಡುವ ಈ ಹಣ ಎಲ್ಲಿ ಹೋಗುತ್ತದೆ ಎಂದು ನಮಗೂ ಅರ್ಥವಾಗುವುದಿಲ್ಲ. ಇದರಷ್ಟು ಹಣ ಕಳ್ಳತನ ಆಗಿರುವುದು ಇಡೀ ರಾಜ್ಯದಲ್ಲಿ ಎಲ್ಲೂ ಇಲ್ಲ. ಸರ್ವಸಾಮಾನ್ಯವಾಗಿ ಜಿಲ್ಲಾಧಿಕಾರಿಗಳು ಸೇರಿ ಭಾರೀ ಕಳ್ಳತನ ನಡೆದವು. ಇದರಷ್ಟು ಹಗರಣ ಯಾವುದೂ ಇಲ್ಲ. ಅಕ್ಷರ ಓದಿದವರು ಏತಕ್ಕೋಸ್ಕರ ಕಾರ್ಯಕ್ರಮ ಕೈಗೆತೆಗೆದುಕೊಂಡಿದ್ದಾರೆ ಎಂದರೆ ಓದಿರುವವರು ಯಾವ ರೀತಿ ದುಡ್ಡು ಹೊಡೆಯಬಹುದು ಎನ್ನುವ ಕಾರ್ಯಕ್ರಮ ಇದಾಗಿದೆ. ವಯಸ್ಕರ ಶಿಕ್ಷಣ ಸಮಿತಿ, ಸಾಕ್ಷರತಾ ಆಂದೋಲನ, ಅದು ಕೇಂದ್ರ ಸರ್ಕಾರದ್ದು, ಇದು ರಾಜ್ಯ ಸರ್ಕಾರದ್ದು.

ಶ್ರೀ ವೈಜನಾಥ್ ಪಾಟೀಲ್ :- ನ್ಯಾಷನಲ್ ಎಂದ ಮೇಲೆ ಎಲ್ಲಾ ಕಡೆ ಅದೇ ನಡೆಯುತ್ತದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ :- ಅಲ್ಲ, ಇದಕ್ಕಾಗಿ ಆಯವ್ಯಯದಲ್ಲಿ ಹಣವನ್ನು ಒದಗಿಸಿಲ್ಲವಾದ್ದರಿಂದ ಅವಶ್ಯಕ ಇರುವ ಮೊತ್ತವನ್ನು ಬೇಡಿಕೆಯಲ್ಲಿ ಸೇರಿಸಲಾಗಿದೆ.

ನಾನು ಹೇಳುವುದು ಏನೆಂದರೆ ಇದನ್ನು ತೆಗೆದುಕೊಂಡು ಅದರ ಜೊತೆ ಮಾರ್ಜ್ ಮಾಡಿಬಿಡಿ. ವಯಸ್ಕರ ಶಿಕ್ಷಣ ಸಮಿತಿ ಇದೆ. ಒಬ್ಬ ಆಫೀಸರನ್ನು ಮಾಡಿ ಅವನಿಗೆ ಒಂದು 25 ಲಕ್ಷ ರೂಪಾಯಿ ದುಡ್ಡು ಕೊಟ್ಟು ಆತನಿಗೆ ಒಂದು ಮನೆ ಕೊಟ್ಟು ಅವರು ಕಾರಿನಲ್ಲಿ ತಿರುಗಾಡಿಕೊಂಡು ಮ್ಯಾನೇಜ್‌ಮೆಂಟ್ ಮಾಡುವ ಬಿಲು ಅಲ್ಲಿ ಕೆಲವರು ಸಂಬಳ ಇಲ್ಲದೆ ಗಲಾಟೆ ಮಾಡಿಕೊಂಡು ಬಂದಿರತಕ್ಕಂಥ ಪರಸ್ಥಿತಿಯನ್ನು ತಾವೆಲ್ಲಾ ನೋಡಿದ್ದೀರಿ. ಇಲ್ಲಾ ಪೂರ್ತಿಯಾಗಿ ವಯಸ್ಕರ ಶಿಕ್ಷಣ ಸಮಿತಿಯನ್ನು ಸಾಕ್ಷರತಾ ಅಂಧೋಲನಕ್ಕೆ ಮಾರ್ಜ್ ಮಾಡಿ. ವಯಸ್ಕರ ಶಿಕ್ಷಣ ಸಮಿತಿಯೂ ಏನೂ ಕೆಲಸ ಮಾಡುತ್ತಾ ಇಲ್ಲ, ಸಾಕ್ಷರತಾ ಅಂದೋಲನ ಸಹ ಏನೂ ಕೆಲಸ ಮಾಡುತ್ತಾ ಇಲ್ಲ. ಅದರಿಂದ ತಾವು ಇದರ ಬಗ್ಗೆ ದುಡ್ಡನ್ನು ಏನು ಪೂರಕ ಬಜೆಟ್ ಎಂದು ಮಾಡಿದ್ದೀರಿ ಅದನ್ನು ದಯವಿಟ್ಟು ಪರಶೀಲನೆ ಮಾಡಿ. ಇದನ್ನು ಜಿಲ್ಲಾ ಪರಿಷತ್ತಿಗೋ ಅಥವಾ ಯಾವುದಕ್ಕೂ ಕೂಡಿ ಒಟ್ಟಾರೆ ಈ ಹಣ ಜವಾಬ್ದಾರಿಯಿಂದ ವಿನಿಯೋಗವಾಗಬೇಕು. ಇಲ್ಲದಿದ್ದರೆ ನೇರವಾಗಿ ಯಾರದೋ ಒಂದ ಮನೆಗೆ ಸೇರಿಕೊಳ್ಳುತ್ತದೆ. ಇನ್ನೊಂದು ಪುಟ ಸಂಖೆಯ 36ರಲ್ಲಿ ಸಣ್ಣ ನೀರಾವರಿ; ನೀರಾವರಿ ಕೆರೆಗಳಿಗೆ ಹೊಸ ಕೆರೆಗಳಿಗೆ ಪಕ್ ಅಪ್‌ಗಳ ನಿರ್ಮಾಣ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ- ಅದಕ್ಕೆ ಒಂದು ಸಂಬಳ, ಬಾಕಿ ಇರುವ ಬಿಲ್‌ಗಳು. ಕೇರಿಗಳ ಬಗ್ಗೆ ನೀವು ಈ ಅಧಿಕಾರಿಗಳನ್ನು ನಂಬಿಕೊಂಡು ಕೆಲಸ ಮಾಡಿದರೆ ಕೆರೆಗಳಿಗೆ ಬಾಕಿ ಬಿಲ್ ಕೊಟ್ಟರೆ ಏನೂ ಪ್ರಯೋಜನವಾಗುವುದಿಲ್ಲ. ಕೆರೆಗಳ ಸಂಬಂಧಪಟ್ಟ ಏರಿಯಾದ ರೈತರ ಸಮಿತಿ ಮಾಡಿ, ಅದಕ್ಕೆ ಅಂದಾಜು ಏನಾಗುತ್ತದೆ ಅದನ್ನು ರೈತರ ಸಮಿತಿ ಗಮನಕ್ಕೆ ತಂದು ಆ ಸಮಿತಿ ಮೂಲಕ ಆ ಕೆರೆಯನ್ನು ಮಾಡತಕ್ಕಂಥ ಒಂದು ಪರಿಸ್ಥಿತಿ ನಿರ್ಮಾಣ ಮಾಡಿದರೆ, ಆ ಕೆರೆಯನ್ನು ಪೂರ್ತಿ ಮೇಂಟೈನ್ ಮಾಡತಕ್ಕಂಥ ಹೊಣೆಗಾರಿಕೆಯನ್ನು ಆ ಗ್ರಾಮಕ್ಕೆ ಸಂಬಂಧಪಟ್ಟವರಿಗೆ ಕೊಟ್ಟರೆ, ಕುಡಿಯುವ ನೀರಿಗೂ ಅನುಕೂಲವಾತ್ತದೆ. ಏಕೆಂದರೆ ಇವತ್ತು ನಾವು ಭೂಮಿಯಲ್ಲಿ ವಾಟರ್ ಟೇಬಲನ್ನು ನೋಡಿದರೆ 500 ಅಡಿಗೆ ಹೋಗಿದೆ. ಮೊನ್ನೆ ಜಾಲಪ್ಪನವರು ಹೇಳುತ್ತಿದ್ದರು, ನಮ್ಮ ಕೋಲಾರ ಜಿಲ್ಲೆಯಲ್ಲಿ 500-600 ಅಡಿಗೆ ಹೋಗಿ ಬಿಟ್ಟಿದೆ ಎಂದು. ಕಾರಣ ಏನು? ಹೊಸ 33 ಸಾವಿರ ಕೆರೆಗಳಲ್ಲಿ ನಾವು ಎಷ್ಟು ಉಳಿಸಿಕೊಂಡಿದ್ದೇವೆ? ಕೆರೆಗಳಿಗೆ ತೂಬು ಹಾಕಿಸುವುದಕ್ಕೆ ನಾವು ಚರ್ಚೆ ಮಾಡಿದ್ದೇವೆ. ಇಲ್ಲಿ ಸಣ್ಣ ನೀರಾವರಿಗೆ ಬಾಕಿ ಇರುವ ಬಿಲ್ 12 ಕೋಟಿ ರೂಪಾಯಿಗಳು. ಅಲ್ಲಿ ಇನ್ನೊಂದು ಸಣ್ಣ ನೀರಾವರಿ ಇದೆ. ಅದು ಯಾವುದು ಎಂದು ಗೊತ್ತಾಗಲಿಲ್ಲ. ಇನ್ನೊಂದು ಪುಟ ಸಂಖ್ಯೆ 46ರಲ್ಲಿ ಬರುತ್ತದೆ. ಸಣ್ಣ ನೀರಾವರಿ ಇಲಾಖೆ ಸಿಬ್ಬಂದಿಯನ್ನು ವರ್ಗಾಯಿಸುವುದರಿಂದ ಅವರುಗಳಿಗೆ ವೇತನ ಮತ್ತು ಭತ್ಯೆಯನ್ನು ನೀಡಲು ಮತ್ತು ಬೆಂಗಳೂರಿನ ಕ್ರೀಡಾ ವಿಭಾಗವನ್ನು ವಿಭಾಗಗಳಿಗೆ ರಚನೆ ಮಾಡಲು ಹೆಚ್ಚು ಹಣದ ಅವಶ್ಯಕತೆ ಇದೆ. ಅಲ್ಲೂ ಸಣ್ಣ ನೀರಾವರಿ ಇಲ್ಲೂ ಸಣ್ಣ ನೀರಾವರಿ. ಯಾವುದು ಇದು.

ಶ್ರೀ ಸಿ.ಬೈರೆಗೌಡ :- ಒಂದು ಬಾಬಿಗೆ ಒಂದೊಂದು ಹೆಡ್ ಆಫ್ ಅಕೌಂಟ್ ಇರುತ್ತದೆ. ಆದುದರಿಂದ ಒಂದು ಕಡೆ ಬಿಟ್ಟು ಎರಡು ಕಡೆ ಬಂದಿರುತ್ತದೆ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್:- ಮಾನ್ಯ ಅಧ್ಯಕ್ಷರೆ, ನಮ್ಮ ಬೀದರ್ ಜಿಲ್ಲೆಗೆ ವರದಾನವಾಗಿರುವಂತಹ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ನೆಡೆಯುತ್ತಿದೆ. ಅದರ ಆರ್ಥಿಕ ಪರಿಸ್ಥಿತಿ ತುಂಬಾ ಗಂಭೀರವಾಗಿದೆ. ಸುಮಾರು 3 ವರ್ಷಗಳಿಂದಲೂ ಸಹಕಾರಿ ಸಂಘದವರು ದುಡ್ಡು ಕೊಟ್ಟಿಲ್ಲದ ಕಾರಣ ಬಹಳ ಕಷ್ಟದಲ್ಲಿದೆ. ರೈತರು

ತೊಂದರೆಯಲ್ಲಿದ್ದಾರೆ. ಅಲ್ಲಿ ಸಂಘದವರು ಆಫೀಸ್ ಬಂದು ಬೀಗ ಹಾಕಿ ಕೊಟ್ಟಿದ್ದಾರೆ. ಈ ರೀತಿಯಾಗಿ ರೈತರಿಗೆ ತೊಂದರೆಯಾಗುತ್ತಿದೆ. ಅದಕ್ಕೆ ಪೂರಕ ಬಜೆಟ್‌ನಲ್ಲಿ ಹೆಚ್ಚಿನ ಹಣವನ್ನು ಒದಗಿಸಿಕೊಡಬೇಕೆಂದು ಮಾನ್ಯ ಮುಖ್ಯ ಮಂತ್ರಿಯವರನ್ನು ಮತ್ತು ಹಣಕಾಸಿನ ಸಚಿವರಿಗೂ ಕೇಳಿದ್ದೆವು. ಆದುದರಿಂದ ಬೀದರ್ ಸಹಕಾರ ಸಕ್ಕರೆ ಕಾರ್ಖಾನೆಯನ್ನು ಪೂರಕ ಬಜೆಟ್‌ನಲ್ಲಿ ಸೇರಿಸಬೇಕು ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು :- ಚರ್ಚೆ ಮುಕ್ತಾಯವಾಯಿತು. ನಾನು ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ;

ದಿನಾಂಕ 31-3-1995 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1, 2, 3, 5, 6, 7, 9, 10, 13, 14, 15, 16, 17, 19, 20, 21, 23, 24, 25, 28, 29, 30, 31, 32, 34, 35, 36, 38, 40, 41, 42, 43, 44, 46, 47, 48, 50, 51, 52, 55, 57, 58, 60 ಮತ್ತು 61 ಇವುಗಳಿಗೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುತ್ತದೆ

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.